# 70

# ಭರವಸೆ ಪುನಃ ಸ್ಥಾಪನೆಗೊಂಡಿತು

# (23:11-35)

ಭರವಸೆಯನ್ನು ಕಳಕೊಳ್ಳುವದು ಆಘಾತವೇ, ಆರೋಗ್ಯವನ್ನು ಕಳಕೊಂಡು ಅದು ಉತ್ತಮವಾಗಬಹುದೆಂದು ಬಯಸುವವರ ಸಂಗಡಲೂ, ಪ್ರತಿ ಪಾತ್ರಕ್ಕನು ಗುಣನಾಗುವದು ಸಂಗಾತಿಯು ಹಿಂದಿರುಗುವರು[1] ಎಂದು ಬಿಂಬಿಸುವವರ ಸಂಡಲೂ ನಾನು ಇದ್ದೆನು. ಅವರ ಭುಜಗಳು ಏರುವದನ್ನು ಮುಖ ಇಳಿದಿದ್ದನ್ನೂ, ಅವರ ಕಣ್ಣುಗಳು ಕಾಂತಿ ಹೀನವಾದದ್ದನ್ನು ನೋಡಿರುವೆನು. ಭರವಸೆಯೇ ನಮ್ಮನ್ನು ಮುಂದುವರಿಸು ವಾಗ, "ಭರವಸೆ ಇಡುವದಕ್ಕೆ ಏನೂ ಇರುವದಿಲ್ಲ" ಎಂಬುದು ನಿರ್ಣಾಯಕವಲ್ಲ (ಯೋಬ 6:11; NCV).

ಒಂದು ಕಾಲದಲ್ಲಿ, ಪೌಲನು ರೋಮಾಯಕ್ಕೆ ಹೋಗುವ ನಿರೀಕ್ಷೆ ಇಟ್ಟಿದ್ದನು (ಅಪೊಸ್ತಲರ ಕೃತ್ಯಗಳು 19:21; ರೋಮಾಪುರ 15:22-29), ಆದರೆ ಆ ನಿರೀಕ್ಷೆಯು ಹುಸಿಯಾಯಿತು. ಆತನು ಯೆರೂಸಲೇಮಿಗೆ ಬಂದ ಕೆಲವು ದಿವಸಗಳಲ್ಲೇ, ಅವನು ಹಿಡಿಯಲ್ಪಟ್ಟು ಬಂಧಿತನಾದನು. ಈಗ ಅವನು ಸೆರೆಮನೆಯಲ್ಲಿದ್ದರೂ ಯೆಹೂದ್ಯರು ಅವನ ಮರಣಕ್ಕಾಗಿ ಕಾದಿದ್ದರು. ರೋಮಾಯಕ್ಕೆ ಹೋಗುವ ಭರವಸೆಯು ನುಚ್ಚು ನೂರಾಯಿತು.

ಇದು ಪೌಲನ ಭರವಸೆಯ ಪುನರ್ಜನ್ಮದಪಾಠವಾಗಿದೆ - ಇದರ ಮೂಲಕ ನಮ್ಮ ಅಳಿಸಿಹೋದ ಭರವಸೆಯು ಪುನಶ್ಚೇತನಗೊಳ್ಳಲು ಸಾಧ್ಯವಿದೆ.[2]

## ದೇವರ ವಾಗ್ದಾನ (23:11)

23:10ರಲ್ಲಿ ಪೌಲನು ಹಿರಿ ಸಭೆಯವರಿಂದ ಕಾಪಾಡಲ್ಪಟ್ಟನು: "ಜಗಳವು ಬಹಳವಾದಾಗ ಅವರು ಪೌಲನನ್ನು ಎಳೆದಾಡಿ ಚೂರು ಚೂರು ಮಾಡರೆಂದು ಸಹಸ್ರಾಧಿಪತಿಯು ಭಯಪಟ್ಟು ಸಿಪಾಯಿಗಳಿಗೆ - ನೀವು ಹೋಗಿ ಅವರ ಮಧ್ಯದಿಂದ ಅವನನ್ನು ಬಲವಂತವಾಗಿ ಹಿಡಿದು ಕೋಟೆಯೊಳಗೆ ತರಬೇಕೆಂದು ಆಜ್ಞೆ ಕೊಟ್ಟನು."

ಸೆರೆಮನೆಯಲ್ಲಿ ಪೌಲನು ಏಕಾಂಗಿಯಾಗಿರುವಾಗ ಪಾಠವು ಆರಂಭವಾಯಿತು. ಆ ಕತ್ತಲಿನಲ್ಲಿ, ಅವನು ಮಲಗಲು ಅಸಾಧ್ಯವಾಯಿತು. ಕ್ಯಾಬೆಲ್‌ರವರು ಆರಾತ್ರಿಯನ್ನು ಪೌಲನ ಜೀವಿತದ ಅತಿ ಕತ್ತಲಿನ ರಾತ್ರಿ[3] ಎಂದು ಕರೆದಿರುವರು. ಸಭಾಂಗಣದಲ್ಲಿ ಪೌಲನು ಹೊಂದಿದ್ದ ಪೆಟ್ಟುಗಳು ದೊಂಬಿ ಜನರು ಮಾಡಿದ ಗಾಯಗಳು ಉಲ್ಬಣಗೊಂಡಿದ್ದವು, ಅವನಿಗೆ ಅತಿಯಾದ ನೋವನ್ನು ಬಾಧೆಯನ್ನು ನೀಡಿದ್ದವು. ಆದರೆ, ಅವನ ಹೃದಯದಲ್ಲಿ ಆಳವಾದ ಗಾಯವಿತ್ತು.[4]

ಲೂಕನು ಪೌಲನ, ಮಾನಸಿಕ ವೇದನೆಯನ್ನು ತಿಳಿಸಿರುವದಿಲ್ಲ, ಏಕೆಂದರೆ ಅದನ್ನು ವರ್ಣಿಸುವದು ಅಸಾಧ್ಯ:[5] ಅವನು ನಿರಾಶನಾಗಿರಬಹುದು; ಅವನು ಬಯಸಿದ ಕ್ರೈಸ್ತ ಸಂಬಂಧಗಳು ವೃದ್ಧಿಯಾಗಲಿಲ್ಲ. ಅವನು ನಿಜವಾಗಿಯೂ ನಿರಾಶನಾಗಿದ್ದನು. ಅವನ ಜೊತೆ ಯೆಹೂದ್ಯರು ಅವನ ಮಾತುಗಳನ್ನು ಕೇಳುವರು ಎಂದು ತಿಳಿದಿದ್ದನು, ಆದರೆ ಅವರು ನಿರಾಕರಿಸಿದ್ದರು. ಅವನಿಗೆ ಸಂದೇಹ ಉಂಟಾಗಿತ್ತು; ಅವನು ತಾನು ರೋಮಾಯಕ್ಕೆ ತಲುಪುವದಿಲ್ಲವೆಂದು ಭಾವಿಸಿದ್ದನು. ಅವನ ಹೃದಯದಲ್ಲಿ ಅಡಗಿದ್ದ ಭರವಸೆಯು ಒಣಗಿ ಹೋಗಿತ್ತು.

ಆದರೆ, ಕರ್ತನು ತಾನೇ ನಿರೀಕ್ಷೆಯನ್ನು ಪುನಃ ಉಳಿಯುವಂತೆ ಮಾಡುವನು.

ದಮಸ್ಕದ ದಾರಿಯಲ್ಲಿ ಆತನು ಪೌಲನಿಗೆ ಕಾಣಿಸಿಕೊಂಡಾಗ ಆಗಾಗ್ಗೆ ಆತನು ಅವನಿಗೆ ಕಾಣಿಸಿಕೊಳ್ಳುವನೆಂಬ ವಾಗ್ದಾನವನ್ನು ಮಾಡಿದ್ದನು (26:16). ಈ ಹಿಂದೆ ಪೌಲನು ನಿರಾಶನಾಗಿ, ಕಳೆಗುಂದಿರುವಾಗ, ಎರಡು ಬಾರಿ ಕರ್ತನು ಅವನಿಗೆ ಕಾಣಿಸಿಕೊಂಡಿದ್ದನು (22:17-21; 18:9, 10). ಈಗ ಕರ್ತನು ಪುನಃ ಬಂದನು: ಆ ದಿನದ ರಾತ್ರಿ ಕರ್ತನು ಅವನ ಬಳಿಯಲ್ಲಿ[6] ನಿಂತುಕೊಂಡು - "ಧೈರ್ಯದಿಂದಿರು;[7] ನೀನು ಯೆರೂಸಲೇಮಿನಲ್ಲಿ[8] ನನ್ನ ಸಂಗತಿಯನ್ನೆಲ್ಲಾ ಸಾಕ್ಷಿಯಾಗಿ ಹೇಳಿದಂತೆಯೇ ರೋಮಾಪುರದಲ್ಲಿಯೂ[9] ಸಾಕ್ಷಿ ಹೇಳ ಬೇಕಾಗುವದು ಎಂದು ಹೇಳಿದನು" (23:11).

ಪೌಲನ ವೇದನೆಯನ್ನು ಕರ್ತನು ತಿಳಿದನು (ಇಬ್ರಿಯ 4:15) ಮತ್ತು ಅವನ ವೇದನೆ ಯನ್ನು ನಿವಾರಣೆ ಮಾಡಿದನು. ಆ ಸನ್ನಿವೇಶದಲ್ಲಿ ಪೌಲನು ನಿರಾಶನಾದನು, ಆದರೆ ಯೇಸು ಅವನಿಗೆ ಆಶಾದಾಯಕವಾದ ಸಂದೇಶವನ್ನು ನೀಡಿದನು: ಆತನು ಅವನಿಗೆ, "ಧೈರ್ಯದಿಂದಿರು" ಅಂದನು ವಾರೆನ್ ವೆರ್ಸಿಬಿಯವರ ವ್ಯಾಖ್ಯಾನ,

> ಯೇಸು ಲೋಕದ ಸೇವೆಯಲ್ಲಿರುವಾಗಈ ಮಾತನ್ನು ಹೇಳಿದ್ದನು. ಪಾರ್ಶ್ವವಾಯು ರೋಗಿಗೂ ಹಾಗೂ (ಮತ್ತಾಯ 9:2) ರಕ್ತ ಕುಸುಮರೋಗವಿದ್ದ ಹೆಂಗಸಿಗೂ (ಮತ್ತಾಯ 9:2) ಈ ಮಾತನ್ನು ಹೇಳಿದ್ದನು. ಸಮುದ್ರ ಅಲ್ಲಕಲ್ಲೋಲವಾಗುವಾಗ ತನ್ನ ಶಿಷ್ಯರಿಗೂ ಈ ಮಾತನ್ನು ಕೂಗಿ ಹೇಳಿದ್ದನು (ಮತ್ತಾಯ 14:27). ಮೇಲು ಪ್ಪರಿಗೆಯಲ್ಲಿ "ಧೈರ್ಯವಾಗಿರು" ಎಂಬ ಮಾತನ್ನು ಪುನರಾವರ್ತಿಸಿದ್ದನು (ಯೋಹಾನ 16:33). ನಮ್ಮ ಕಷ್ಟದ ಸಮಯದಲ್ಲಿಯೂ ಕರ್ತನು ನಮ್ಮೊಂದಿಗಿದ್ದು ಧೈರ್ಯಪಡಿಸುವದರಿಂದ, ಅದನ್ನು ಹಾದು ಹೋಗುವದಕ್ಕೆ ಸಾಧ್ಯವಿದೆ.[10]

ಯೆಹೂದ್ಯರಿಗೆ, ಮನವರಿಗೆ ಮಾಡಲಾಗಲಿಲ್ಲವೆಂದು ಪೌಲನು ನಿರಾಶನಾದನು, ಆದರೆ, ಯೇಸು ಅವನಿಗೆ ಹೊಣೆಗಾರಿಕೆಯ ಆದೇಶವನ್ನು ನೀಡಿದ್ದನು: ನೀನು ಈಗಾಗಲೇ ಯೆರೂಸಲೇಮಿನಲ್ಲಿ ಯಥಾರ್ಥವಾದ ಸಾಕ್ಷಿಯನ್ನು ನೀಡಿರುವಿ; ಜನರನ್ನು ಪರಿವರ್ತನೆ ಮಾಡುವದು ಅವನ ಕೆಲಸವಾಗಿರದೆ, ಪ್ರಸಂಗ ಮಾಡುವದೇ ಆಗಿತ್ತು. ಅದನ್ನು ಅವನು ಮಾಡಿದ್ದರಿಂದ, ಕರ್ತನು ಅದನ್ನ ಶ್ಲಾಘನೆ ಮಾಡಿದ್ದನು. ನಾವು ದೇವರನ್ನು ಮೆಚ್ಚಿಸುವದಕ್ಕೆ "ಯಶಸ್ವಿ" ಎನ್ನುವಂಥದ್ದು ಮಾತ್ರ ಸೂಚನೆಯಾಗಿರುವದಿಲ್ಲ. ನಂಬಿಗಸ್ತಿಕೆಯಿಂದ ನಮ್ಮ ಕರ್ತವ್ಯವನ್ನು ನಿರ್ವಹಿಸಿದರೆ, ಕರ್ತನು ಸಂತೋಷಪಡುತ್ತಾನೆ.

ಭವಿಷ್ಯದ ಬಗ್ಗೆ ಪೌಲನು ನಿರಾಶನಾಗಿರುವಾಗ, ಯೇಸು ಅವನಿಗೆ ಭರವಸೆಯನ್ನು ನೀಡಿ ದನು: "ನೀನು ರೋಮಾಪುರದಲ್ಲೂ ಸಾಕ್ಷಿ ಹೇಳಬೇಕು"[11] ಈ ಮಾತಿನಿಂದ, ಪೌಲನು ರೋಮಾಯಕ್ಕೆ ಹೋಗುವದನ್ನು ಖಚಿತ ಪಡಿಸಿಕೊಂಡನು. ಆತ್ಮನು ನೀಡಿದ ಮಾಹಿತಿಯಂತೆ, ಯೆರೂಸಲೇಮಿನಲ್ಲಿ, "ಬೇಡಿ ಬಂಧನಗಳು" ಕಾಯುತ್ತಿದ್ದರು (20:22, 23). ಅದಕ್ಕಿಂತ ಹೆಚ್ಚಿನ ವಿಷಯವನ್ನು ಆತ್ಮನು ತಿಳಿಸಿರಲಿಲ್ಲ. ರೋಮಾಯಕ್ಕೆ ಹೋಗುವ ಆಲೋಚನೆಯು ನಿಷ್ಫಲವಾದಾಗ, ರೋಮಾ ರಾಜಧಾನಿಗೆ ಹೋಗುವ ರಾಜಮಾರ್ಗವನ್ನು ಕರ್ತನು ತೆರೆದನು!

ಕರ್ತನು ಪೌಲನಿಗೆ ಸಕಲ ಸುಖಗಳನ್ನು ವಾಗ್ದಾನ ಮಾಡಲಿಲ್ಲ, ಸ್ವತಂತ್ರವನ್ನಾಗಲೀ ಅಥವಾ ಯಶಸ್ವಿಯನ್ನಾಗಲೀ ವಾಗ್ದಾನ ಮಾಡಲಿಲ್ಲ. ಪೌಲನು ರೋಮಾಪುರಕ್ಕೆ ಹೋಗು ವನೆಂದು ಮಾತ್ರ ವಾಗ್ದಾನ ಮಾಡಿದನು - ಅಪೊಸ್ತಲನಿಗೆ ಅಗತ್ಯವಿದ್ದದ್ದು ಇಷ್ಟೆ. ದರ್ಶನವು ಮುಗಿದಾಗಲೂ ಪೌಲನ ದೇಹ ಸಂಕಟ ಪಡುತ್ತಿತು, ಅವನು ಇನ್ನೂ ಸೆರೆ ಮನೆಯ ಗೋಡೆ ಗಳ ನಡುವೆ ಇದ್ದನು. ಅವನು ರೋಮಾಯಕ್ಕೆ ಹೇಗೆ ಹೋಗಬೇಕೆಂದು ತಿಳಿಯದೆ ಇದ್ದರೂ, ಅವನು ಚಿಂತಿಸಲಿಲ್ಲ. ಈಗ ದೇವರ ವಾಗ್ದಾನದ ನಿಮಿತ್ತ! ಸತ್ತು ಹೋದಂತ ಪೌಲನ ಭರವಸವು ಪುನ ಚಿಗುರಿತು; ನಿರೀಕ್ಷೆಯ ಕಿಡಿಯು ಅವನ ಹೃದಯದಲ್ಲಿ ಪುನಃ ಬೆಳಗಿತು.

ರಾತ್ರಿಯ ಕತ್ತಲಾಗಿ, ನಿರೀಕ್ಷೆಯು ಕ್ಷೀಣವಾಗಿರುವಾಗ, ಕರ್ತನು ನಮ್ಮ ನಿರೀಕ್ಷೆಯನ್ನು ಪುನಃ ಹಚ್ಚುಕೊಳ್ಳುವಂತೆ ಮಾಡುವನು. ನಮ್ಮ ಪ್ರತಿಯೊಂದು ಕನಸುಗಳು ನೆರವೇರುತ್ತದೆ ಎಂದು ಕರ್ತನು ದರ್ಶನ ನೀಡುವದಿಲ್ಲ. ಹಾಗೂ ಆತನು ಧೈರ್ಯದ ಸಂದೇಶವನ್ನು ನೀಡುವನು, ಹೊಣೆ ಹಾಗೂ ಭರವಸೆಯನ್ನು ನೀಡುವನು. ಆತನ ಧೈರ್ಯದ ಸಂದೇಶ ವೆನೆಂದರೆ, "ಯೆಹೋವನನ್ನು ನಿರೀಕ್ಷಿಸಿಕೊಂಡಿರು; ದೃಢವಾಗಿರು ನಿನ್ನ ಹೃದಯವು ಧೈರ್ಯದಿಂದಿರಲಿ; ಯೆಹೋವನನ್ನು ನಿರೀಕ್ಷಿಸಿಕೊಂಡೇ ಇರು..." ಎಂಬುದಾಗಿರುತ್ತದೆ (ಕೀರ್ತನೆ 27:14). ಆತನ ಮೆಚ್ಚಿಕೆಯ ಸಂದೇಶವೇನೆಂದರೆ "ಭಲಾ ನಂಬಿಗಸ್ತನಾದ ಆಳು" ಎಂಬದೇ (ಮತ್ತಾಯ 25:21; KJV). ಆತನ ಭರವಸೆಯ ಸಂದೇಶವೇನೆಂದರೆ, "ನಾವು ದೇವರ ಚಿತ್ತಾನುಸಾರವಾಗಿ ಬೇಡಿ ಕೊಂಡರೆ ಆತನು ನಮ್ಮ ವಿಜ್ಞಾಪನೆಯನ್ನ ಕೇಳುತ್ತಾನೆಂಬ ಧೈರ್ಯವು ಆತನ ವಿಷಯವಾಗಿ ನಮಗುಂಟು" (1 ಯೋಹಾನ 5:14). ನಮ್ಮಲ್ಲಿ ಎಲ್ಲವು ಸರಿಯಾಗಿ ಇರದೆ ಇರಬಹುದು, ಆದರೆ ಈ ಅಂಶಸತ್ಯವಾಗಿದೆ: ದೇವರು ನಮ್ಮನ್ನು ಪ್ರೀತಿಸಿ, ನಮಗಾಗಿ ಚಿಂತಿಸುತ್ತಾನೆ. "ಇದಲ್ಲದೆ ದೇವರ ಸಂಕಲ್ಪದ ಮೇರೆಗೆ ಕರೆಯಲ್ಪಟ್ಟು ಆತನನ್ನು ಪ್ರೀತಿಸುವವರ ಹಿತಕ್ಕಾಗಿ ಎಲ್ಲಾ ಕಾರ್ಯಗಳು ಅನುಕೂಲವಾಗುತ್ತವೆ ಎಂದು ನಮಗೆ ಗೊತ್ತದೆ" (ರೋಮಾಪುರ 8:28)!

ನಾವು ಹೇಳುವ ಕಥೆಯು ಇನ್ನು ಮುಗಿದಿರುವದಿಲ್ಲ. ತಕ್ಷಣವೇ ಕರ್ತನ ವಾಗ್ದಾನವು ಪರೀಕ್ಷಿಸಲ್ಪಟ್ಟಿತು.

## ದೇವರ, ಅನುಗ್ರಹ (23:12-35)

### ಒಂದು ಒಳಸಂಚು ಮಾಡಲಾಯಿತು (ವಚನಗಳು 12-15)

ದೇವರು ಪೌಲನ ಭವಿಷ್ಯದ ಕುರಿತು ಸಂಕಲ್ಪಮಾಡಿದಾಗ, ಅಪೊಸ್ತಲನ ವೈರಿಗಳು ಸಹ ಒಳಸಂಚು ಮಾಡಿ ಅವನ ಭವಿಷ್ಯವನ್ನು ಹಾಳುಮಾಡಲು ಯತ್ನಿಸಿದರು. ಅನ್ಯರ ಅಂಗಳದಿಂದಲೂ ಮತ್ತು ಹಿರೀ ಸಭೆಯಿಂದಲೂ ಪೌಲನು ತಪ್ಪಿಸಿಕೊಂಡನೆಂದು ತಿಳಿದು, ಅವನ ತಪ್ಪನ್ನು ರುಜುವಾತುಪಡಿಸಲು ಒಂದು ಸಂಚನ್ನು ಮಾಡಿದರು. "ಬೆಳಗಾದ ಮೇಲೆ ಯೆಹೂದ್ಯರು ಒಳಸಂಚುಮಾಡಿ - ನಾವು ಪೌಲನನ್ನು ಕೊಲ್ಲುವ ತನಕ ಅನ್ನ ಪಾನವೇನೂ ಮುಟ್ಟುವದಿಲ್ಲವೆಂದು ಶಪಥಮಾಡಿಕೊಂಡರು.[12] ಹೀಗೆ ಮಾಡಿದವರು ನಾಲ್ವತ್ತು ಮಂದಿಗಿಂತ ಹೆಚ್ಚಾಗಿದ್ದರು" (ವಚನಗಳು 12, 13). ಒಂದು ವೇಳೆ ಅವರ ಶಪಥವು: "ನಾವು ಪೌಲನನ್ನು ಕೊಲ್ಲುವವರೆಗೆ ನಾವು ಊಟಮಾಡಿದರೆ ಬೇಕಾದದ್ದನ್ನು ಮಾಡಲಿ" ಎಂಬದಾಗಿರಬಹುದು. ಇಂಥಾ ಒಂದು ಮರಣಕರವಾದ ಸಂಚಿಗೆ, ಕರ್ತನ ನಾಮವನ್ನು ಅವರು ಸೇರಿಸಿದ್ದರಿಂದ, ನಿಮಗೆ ದಿಗ್ಭ್ರಮೆಯಾಯಿತೇ? ತನ್ನ ಅನುಯಾಯಿಗಳಿಗೆ ಯೇಸು ವಾಗ್ದಾನ ಮಾಡಿ "ನಿಮಗೆ ಬಹಿಷ್ಕಾರ ಹಾಕುವರು; ಅದಲ್ಲದೆ ನಿಮ್ಮನ್ನು ಕೊಲ್ಲುವವನು ತಾನು ದೇವರಿಗೆ ಯಜ್ಞವನ್ನು ಮಾಡಿದ್ದೇನೆಂದು ನೆನಸುವ ಕಾಲ ಬರುತ್ತದೆ" (ಯೋಹಾನ 16:2; NIV) ಎಂದನು.

ಈ ಶಪಥಕ್ಕೆ ಒಳಗಾದ ಈ ಯೆಹೂದ್ಯರು ಯಾರು? 20 ವರ್ಷಗಳ ಹಿಂದೆ ಪೌಲನನ್ನು ಕೊಲ್ಲಲು ಪ್ರಯತ್ನಿಸಿದ ಗ್ರೀಕ್ ಭಾಷೆಯ ಯೆಹೂದ್ಯರೆ (9:29)? ಅಥವಾ ಕೆಲವು ದಿವಸಗಳ ಹಿಂದೆ ಪೌಲನು ಹಿರಿ ಸಭೆಯಲ್ಲಿರುವಾಗ, ದೊಂಬಿ ನಡೆಸಿದ ಆಸ್ಯದ ಯೆಹೂದ್ಯರೆ (21:27)? ಅಥವಾ ಸಭೆಯಲ್ಲಿ ಕ್ರೋದಗೊಂಡ ಸದ್ದುಕಾಯರೇ (23:6-9) ಅಥವಾ ಸದ್ದು ಕಾಯರಿಗೆ ಒಳಿತು ಬಯಸುವವರೇ? ಅಥವಾ ಇವೆರೆಲ್ಲರ ಸಂಗಡ, ಸೇರಿಕೊಂಡ ಇತರೆ ಜನರೇ ಪೌಲನ ವಿರೋಧಿಗಳಲ್ಲಿ ಯೆಹೂದ್ಯರ ದಂಡೇ ನೆಲೆಸಿತ್ತು.

ಅವರ ಒಳಸಂಚಿಗೆ ಹಿರೀಸಭೆಯ ಸಹಾಯವು ಅವಶ್ಯವಿದದರೂ, ಮಹಾಯಾಜಕರ ಹಾಗೂ ಅವರ ಸ್ನೇಹಿತರ ಬಲಹೀನತೆಯನ್ನು ಅರಿತ್ತಿದ್ದರೂ,[13] ಈ ಒಳಸಂಚಿನ ಕೊಲೆಗೆ

ಅವರನ್ನು ಆಹ್ವಾನಿಸುವದಕ್ಕೆ ಹಿಜರಿಯಲಿಲ್ಲ.

> ಇವರು ಮಹಾಯಾಜಕರ ಮತ್ತು ಸಭೇ ಹಿರಿಯರ ಬಳಿಗೆ ಹೋಗಿ[14] - ನಾವು ಪೌಲನನ್ನು ಕೊಲ್ಲುವ ತನಕ ಬಾಯಲ್ಲಿ ಏನೂ ಹಾಕುವದಿಲ್ಲವೆಂದು ಕಠಿನ ಶಪಥವನ್ನು ಮಾಡಿಕೊಂಡಿದ್ದೇವೆ. ಆದದರಿಂದ ನೀವು ಸಭೆಯವರ ಸಹಿತ ಸಹಸ್ರಧಿಪತಿಯ ಬಳಿಗೆ ಹೋಗಿ ಪೌಲನ ಸಂಗತಿಯನ್ನು ಇನ್ನೂ ಸೂಕ್ಷ್ಮವಾಗಿ ವಿಮರ್ಶೆ ಮಾಡಬೇಕೆಂದು ನೆವಹೇಳಿ ಅವನನ್ನು ಕೋಟೆಯಿಂದ ನಿಮ್ಮ ಬಳಿಗೆ ಕರೆದುಕೊಂಡು ಬರುವ ಹಾಗೆ ಕೇಳಿ ಕೊಳ್ಳಬೇಕು.[15] ನಾವಾದರೋ ಅವನು ಹತ್ತರ ಬರುವದಕ್ಕಿಂತ ಮುಂಚೆಯೇ ಅವನನ್ನು ಕೊಲ್ಲುವದಕ್ಕೆ ಸಿದ್ಧವಾಗಿದ್ದೇವೆ ಅಂದರು (ವಚನಗಳು 14, 15).[16]

ಆ ಒಳಸಂಚು ಬಹಳ ಸರಳವಾಗಿತ್ತು. ಹಿಂದಿನ ದಿನದಲ್ಲಿ ಉಂಟಾದ ದಂಗೆಯಕುರಿತು, ರೋಮಾಯ ಅಧಿಕಾರಿಗೆ ಹಿರಿಸಭೆಯವರು ಕ್ಷಮಾಪಣೆಯನ್ನು ಕೇಳಿ, ಇನ್ನು ಮುಂದೆ ದಂಗೆ ಉಂಟಾಗದಂತೆ ನೋಡಿಕೊಳ್ಳುವೆವು ಅಂದರು. ಪೌಲನ ಅಪರಾಧದ ಕುರಿತು ಅಧಿಕಾರಿಯೂ ಭರವಸೆ ನೀಡುವ ಸಾಧ್ಯತೆಯಿತ್ತು. ನಾಲ್ವತ್ತು ಜನ ಒಳಸಂಚುಗಾರರು, ಕತ್ತಿಗಳನ್ನು ಅಡಗಿಸಿಕೊಂಡವರಾಗಿ, ದೇವಾಲಯದ ಜನರಲ್ಲಿ ಸೇರಿ ಕೊಂಡಿರಬಹುದು. ಪೌಲನನ್ನು ಅನ್ಯರ ಅಂಗಳದಿಂದ ಸಿಪಾಯಿಗಳು ಹೊರತರುವಾಗ,[17] ಕೊಲೆಪಾತಕರು ಅವರ ಮಲೆ ಬಿದ್ದು ಇರಿಯುವಾಗ, ಪೌಲನ ರಕ್ತವೂ, ಅವನನ್ನು ಕಾಪಾಡುವವರ ರಕ್ತವೂ ಅಂಗಳದಲ್ಲಿ ಚೆಲ್ಲುವ ಸಾಧ್ಯತೆಯಿತ್ತು.[18] ಈ ಕ್ರಿಯೆಯ ಕುರಿತು ಮಹಾಯಾಜಕನು ಹಿರೀ ಸಭೆಯನ್ನು ಅಂತ್ಯಗೊಳಿಸುವ ಸಾಧ್ಯತೆಯಿತ್ತು. ಇದು ಯಶಸ್ವಿಗೊಳ್ಳುವಂಥ ಸಂಚಾಗಿತ್ತು.

ವಿವೇಕಿಯು ಪ್ರಕಟಿಸಿದಂತೆ: "ಯಾವ ಜ್ಞಾನವೂ, ಯಾವ ವಿವೇಕವೂ, ಯಾವ ಆಲೋಚನೆಯೂ ಯೆಹೋವನೆದುರಿಗೆ ನಿಲ್ಲುವದಿಲ್ಲ" (ಜ್ಞಾನೋಕ್ತಿ 21:30; NIV) - ಮತ್ತು ಪೌಲನು ರೋಮಾಪುರಕ್ಕೆ ಸೇರುವನು ಎಂಬ ಭರವಸೆಯನ್ನು ಕರ್ತನು ನೀಡಿದ್ದನು: ಹಾಗಾದರೆ, ಸಂಚನ್ನು ನಿಲ್ಲಿಸಲು ಹೇಗೆ ಸಾಧ್ಯವಾಯಿತೆ? ಪೌಲನು ತಪ್ಪಿಸಿಕೊಳ್ಳುವಂತೆ ಕರ್ತನು ಅದ್ಭುತವನ್ನು ಮಾಡಿದನೇ? ದೇವರು ಆ ಕಾರ್ಯವನ್ನು ಈಗಾಗಲೇ ಮಾಡಿದ್ದನು (ಅಪೊಸ್ತಲರ ಕೃತ್ಯಗಳು 5:19; 12:7; 16:26). ಆದರೆ, ಅಪೊಸ್ತಲರ ಕೃತ್ಯಗಳು 23ರಲ್ಲಿ, ಇಂತಹ ಅದ್ಭುತವನ್ನು ದೇವರು ಮಾಡಲಿಲ್ಲ. ಅದರ ಬದಲಾಗಿ, ದೇವರು ವಿಶೇಷ ಅನುಗ್ರಹವನ್ನು ನೀಡಿದನು.

ದೇವರ ಅನುಗ್ರಹದ ಕುರಿತು ಗ್ರಂಥಗಳಿಂದ ಕಲಿಯುವಾಗ, ನಮ್ಮ ನಿರೀಕ್ಷೆಯು ಪುನಶ್ಚೇ ತನಗೊಳ್ಳುತ್ತದೆ. ಒಂದು ಸಾರಿ ಬ್ರೆವರ್‌ವರಿಗೆ,[19] "ದೇವರ ವಿಶೇಷ ಅನುಗ್ರಹದಲ್ಲಿ ನಂಬಿಕೆ ಇದೆಯೇ?" ಎಂಬ ಪ್ರಶ್ನೆಯನ್ನು ಕೇಳಲಾಯಿತು, ಅದಕ್ಕೆ ಅವರು ಅದಕ್ಕಿಂತಲೂ ವಿಶೇಷವಾದದ್ದು ಇದೆಯೇ?[20] ಎಂಬ ಉತ್ತರವನ್ನು ನೀಡಿದರು. ನನ್ನ ಸತ್ಯವೇದದ[21] ಅಪೊಸ್ತಲರ ಕೃತ್ಯಗಳು 24:2ರಲ್ಲಿ ಮಾತ್ರ ದೇವರ (ಅನುಗ್ರಹ) ಅಥವಾ "ಪರಾಂಬರಿಕೆ ಮರಿಕ್ಕೆ" ಎಂಬ ಪದವಿದೆ. ಆದರೆ ಅದು ದೇವರ ಪರಾಮರಿಕೆ ಎಂದಿರದೆ, ರೋಮಾ ಅಧಿಕಾರಿಯ ಪರಾಂಬರಿಕೆ ಎಂಬ ಉಲ್ಲೇಕವಿದೆ. ರೋಮಾಯದ "ಪರಾಂಬರಿಕೆ" ಎಂಬ ಪದ, ಲ್ಯಾಟೀನ್ ಭಾಷೆಯಲ್ಲಿ "ಮುನ್ನೋಡು" ಎಂಬ ಅರ್ಥವನ್ನು ನೀಡುತ್ತದೆ (ಎದುರು ನೋಡು). ಮತ್ತು ಗ್ರೀಕ್ ಭಾಷೆಯ "ಪರಾಂಬರಿಕೆ" ಎಂಬುದು ಸಹ ಇದೇ ಅರ್ಥವನ್ನು ನೀಡುತ್ತದೆ: ಮುಂದಾಲೋಚನೆ (ಸಮಯದ) ಇಂಗ್ಲೀಷ್ ಹಾಗೂ ಗ್ರೀಕ್ ಪದಗಳಲ್ಲಿ, "ಮುಂದಾಗಿ ಯೋಜನೆ" ಮಾಡು ಎಂಬ ಅರ್ಥವಿದೆ. ಹೌದು ಮಾನವರು ಯಾವಾಗಲೂ ಇದನ್ನೇ ಮಾಡುವರು, ಆದರೆ ದೇವರೂ ಸಹ ತನ್ನ ಜನರಿಗೆ ಇದನ್ನೇ ಮಾಡುವನು ಎಂದು ತಿಳಿಯುವದು ಶ್ರೇಷ್ಟವಲ್ಲವೇ!

ದೇವರು ಸ್ವಾಭಾವಿಕವಾಗಿ ಅಥವಾ ಅಸ್ವಭಾವಿಕವಾಗಿಯಾದರೂ ಪರಾಂಬರಿಕೆ ಮಾಡುವನು (ಅದ್ಭುತಗಳ ಮೂಲಕವೂ). ಒಬ್ಬನು "ಪರಾಂಬರಿಕೆಯನ್ನು"

"ಇತಿಹಾಸದಲ್ಲಿನ[22] ದೇವರ ಕೈಗಳು" ಎಂದು ಕರೆದಿರುವನು. ನಮ್ಮ ಹಿಂದಿನ ಪಾಠದಲ್ಲಿ, ಪೌಲನ ಯೆರೂಸಲೇಮಿನ ಸಂದರ್ಶನದಲ್ಲಿ, ದೇವರು ಯಾವ ರೀತಿಯಲ್ಲಿ ಪುನಃ ಪುನಃ ಪರಾಂಬರಿಕೆ ಮಾಡಿದನೆಂದು ತಿಳಿದೆವು. ಪೌಲನು ದೇವಾಲಯದಲ್ಲಿ ದೊಂಬಿ ಜನರ ಕೈಗೆ ಸಿಕ್ಕಿಬಿದ್ದಾಗ, ರೋಮಾಯದ ಸಹಸ್ರಾಧಿಪತಿಯು ಅವನ ನೆರವಿಗೆ ಬಂದದ್ದು ಆಕಸ್ಮಿಕವೇ? ಅಥವಾ ಅವನು ರೋಮಾ ಹಕ್ಕುದಾರನಾದ್ದರಿಂದ, ರೋಮಾಯರಿಂದ ಅರ್ಧಮರಣದಿಂದ ತಪ್ಪಿಸಿಕೊಂಡದ್ದು ಅದೃಷ್ಟವೇ? ಅವನು ರೋಮಾ ಹಕ್ಕುದಾರನಾದ್ದರಿಂದ, ರೋಮಾಯರಿಂದ ರಕ್ಷಿಸಲ್ಪಟ್ಟಿದ್ದ "ಸಹಜ ಸಂಗತಿಯಾಯಿತೆ"? ಇಲ್ಲ, ಅದು ದೇವರ ನಿರ್ಭಂದಕ್ಕೆ ಒಳಪಟ್ಟಿತ್ತು!

ಈ ದಿನಗಳಲ್ಲಿ, ದೇವರು ಅದ್ಭುತಗಳ ಮೂಲಕ ಮಾತನಾಡುವದಿಲ್ಲ ಎಂದು ನಾವುಗಳು ಉಪದೇಶ ಮಾಡುವಾಗ, ನಾವು ದೇವರನ್ನು ನಿರ್ಭಂಧ ಮಾಡುತ್ತೇವೆ. ಅದ್ಭುತಗಳ ಹೊರತಾಗಿ ದೇವರು ಕಾರ್ಯಸಾಧಿಸುವದಿಲ್ಲ ಎಂದು ನಂಬುವವರು, ದೇವರನ್ನು ನಿರ್ಭಂಧಿಸುತ್ತಾರೆ! ವಚನ 12ರಿಂದ 35ರವರೆಗಿನ ವಾಕ್ಯಭಾಗದಲ್ಲಿ, ಎಲ್ಲಿಯೂ ಕೂಡ ದೇವರು ಒಂದು ಸಾರಿಯೂ "ಅದ್ಭುತ" ಎಂಬ ಪದಪ್ರಯೋಗವಾಗದಿದ್ದರೂ, ಈ ಎಲ್ಲಾ ಸಂಗತಿಗಳ ಹಿನ್ನೆಲೆಯಲ್ಲಿ ದೇವರ ಕೈಗಳು ಕಾರ್ಯ ಮಾಡುತ್ತಿದ್ದವು!

### ಸಂಚು ಬಯಲಾಯಿತು (ವಚನಗಳು 16-22)

ವಚನ 16ರಲ್ಲಿ ಕಥೆಯನ್ನು ಮುಂದುವರಿಸುತ್ತೇವೆ: "ಅವರು ಹೊಂಚಿಕೊಂಡಿರುವದನ್ನು ಪೌಲನ ಸೋದರಳಿಯನು ಕೇಳಿಸಿಕೊಂಡನು" (ವಚನ 16ಎ). ಹಾಗೆ ಲೂಕನ ಹೇಳಿಕೆಗಳು ನಮ್ಮ ಗಮನವನ್ನು ಸೆಳೆಯುತ್ತದೆ![23] ಈ ಸೋದರಳಿಯನು ಯಾರು?[24] ಅವನು ಏಕೆ ಯೆರೂಸಲೇಮಿನಲ್ಲಿದ್ದನು?[25] ಅವನು ಕ್ರೈಸ್ತನಾಗಿದ್ದನೇ?[26] ಆ ಹೊಂಚಿನ ಯೋಜನೆಯ ಬಗ್ಗೆ ಹೇಗೆ ತಿಳುಕೊಂಡನು?[27] ಈ ಅಂಶಗಳು ಲೂಕನಿಗೆ ಪ್ರಮುಖವಾಗಿರಲಿಲ್ಲ. ಆದರೆ ಯೌನಸ್ತನು ಹೊಂಚನ್ನು ತಿಳಿದವನಾಗಿ, ಪೌಲನಿಗೆ ಸುದ್ಧಿಯನ್ನು ನೇರವಾಗಿ ತಿಳಿಸಿದನು, ಇದು ಪ್ರಮುಖ ಸಂಗತಿ. "ಅವನು ಕೋಟೆಯೊಳಗೆ ಬಂದು ಪೌಲನಿಗೆ ತಿಳಿಸಿದನು" (ವಚನ 16ಬಿ). (ಒಂದು ಸಾರಿ ಪೌಲನು ರೋಮಾ ಹಕ್ಕುದಾರನೆಂದು ಹೇಳಿ, ತಾತ್ಕಾಲಿಕವಾಗಿ ತಪ್ಪಿಸಿಕೊಂಡಿದ್ದನು, ಆಗ ಜನರು ಅವನನ್ನು ಸಂಧಿಸುವ ಅವಕಾಶವು ಇತ್ತು [ಗಮನಿಸಿ 24:23; 28:30].[28])

ತನ್ನ ಸೋದರಳಿಯನ ಸುದ್ಧಿಯಿಂದ ಪೌಲನು ಸ್ವಾಭಾವಿಕವಾಗಿ ತಲ್ಲಣಗೊಂಡನು. ನಾವು ಮುಂದೆ ಓದುವಂತೆ,

> ಪೌಲನು ಶತಾಧಿಪತಿಗಳಲ್ಲಿ ಒಬ್ಬನನ್ನು ಕರೆಯಿಸಿ - ಈ ಯೌವನಸ್ಥನನ್ನು ಸಹಸ್ರಾಧಿಪತಿಯ ಬಳಿಗೆ ಕರೆದು ಕೊಂಡು ಹೋಗು; ಅವನಿಗೆ ತಿಳಿಸಬೇಕಾದ ಒಂದು ಮಾತು ಆದೆ ಎಂದು ಹೇಳಿದನು. ಶತಾಧಿಪತಿ ಅವನನ್ನು ಸಹ ಸ್ರಾಧಿಪತಿಯ ಬಳಿಗೆ ಕರೆದು ಕೊಂಡು ಹೋಗಿ - ಸೆರೆಯವನಾದ ಪೌಲನು ನನ್ನನ್ನು ಕರೆದು ಈ ಯೌವನಸ್ಥನನ್ನು ತಮ್ಮ ಬಳಿಗೆ ಕರೆದು ಕೊಂಡು ಹೋಗುವಂತೆ ಬೇಡಿಕೊಂಡನು; ತಮಗೆ ತಿಳಿಸಬೇಕಾದ ಏನೋ ಒಂದು ಮಾತು ಅದೆಯಂತೆ ಎಂಬುದಾಗಿ ಹೇಳಲು ಸಹಸ್ರಾಧಿಪತಿಯು ಅವನನ್ನು ಕೈ ಹಿಡಿದು ಒಂದು ಕಡೆಗೆ ಏಕಾಂತವಾಗಿ ಕರೆದು ಕೊಂಡು ಹೋಗಿ - ನೀನು ನನಗೆ ಹೇಳ ಬೇಕಾದದ್ದು ಏನು? ಎಂದು ಕೇಳಿದನು (23:17-19).

ರೋಮಾಯದ ಅಧಿಕಾರಿಯು ಆ ಯೌವನಸ್ತನ ಮುಖವನ್ನು ದೃಷ್ಟಿಸಿದಾಗ, ಅವನಲ್ಲಿ ಯಾವುದೋ ಒಂದು ಸುದ್ಧಿ ಇದೆಯೆಂದು ತಿಳಿದನು, ಅದು ಒಂದು ಪರಿಣಾಮ ಬೀರುವ ಸುದ್ಧಿಯಾಗಿತ್ತು, ಅ ಸುದ್ದಿಯನ್ನು ಅವನಿಂದ ಯಾರೂ ಕೇಳಿಸಿಕೊಳ್ಳದಂತೆ ಅವನನ್ನು ಒಂದು

ಬದಿಗೆ ಕರೆದನು. ಅವನ ಬಾಯಿಂದ[29] ಸಹಸ್ರಾಧಿಪತಿಗೆ ಮುಟ್ಟಿದ ಸುದ್ದಿಯ ವಿಚಾರದಲ್ಲಿ ಆ ಬಾಲಕನು[30] ವಿಶೇಷವಾದವನು ಎಂಬುದನ್ನು ಪಂಡಿತರುಗಳು ಗ್ರಹಿಸಿದರು. ಅಂಥ ಒಂದು ಅಪಾಯಕಾರಿಯಾದ ಸುದ್ಧಿಯನ್ನು ಸೆರೆಮನೆಗೆ ತಂದದ್ದರಿಂದ ಅವನು ಧೈರ್ಯಶಾಲಿಯೇ ಇರಬಹುದು.

ಆ ಬಾಲಕನು, ಸಹಾಸ್ರಾಧಿಪತಿಗೆ ನೀಡಿದ ವಿಚಾರಗಳ ಬಗ್ಗೆ ಊಹೆ ಮಾಡಿಕೊಳ್ಳಿರಿ:

> ಅವನು - ಯೆಹೂದ್ಯರು ಪೌಲನ ಸಂಗತಿಯನ್ನು ಇನ್ನೂ ಸಕ್ಷ್ಮವಾಗಿ ವಿಚಾರಣೆ ಮಾಡಬೇಕಂಬ ನೆವ ಹೇಳಿ ನೀನು ನಾಳೆ ಅವನನ್ನು ಹಿರೀ ಸಭೆಯ ಬಳಿಗೆ ಕರೆದು ಕೊಂಡು ಬರಬೇಕೆಂದು ಕೇಳಿಕೊಳ್ಳುವದಕ್ಕೆ ಒಪ್ಪಂದ ಮಾಡಿಕೊಂಡಿದ್ದಾರೆ. ನೀನು ಅವರ ಮಾತಿಗೆ ಒಡಂಬಡಬೇಡ; ಯಾಕಂದರೆ ನಾಲ್ವತ್ತಕ್ಕಿಂತ ಹೆಚ್ಚು ಮಂದಿ ತಾವು ಅವನನ್ನು ಕೊಲ್ಲುವ ತನಕ ಅನ್ನಪಾನವೇನೂ ಮುಟ್ಟುವದಿಲ್ಲವೆಂದು ಶಪಥವನ್ನು ಮಾಡಿಕೊಂಡು ಅವನಿಗೋಸ್ಕರ ಹೊಂಚುಹಾಕುತ್ತಾ ಇದ್ದಾರೆ[31] (ವಚನಗಳು 20, 21).

ಪೌಲನ ಸೋದರಳಿಯನು ತಂದ ಸುದ್ದಿಯ ನಿಮಿತ್ತವಾಗಿ, ಸಹಸ್ರಾಧಿಪತಿಯು ಅವನನ್ನು ಇನ್ನೂನಂಬುವ ಹಾಗೆ ಮಾಡಿತು. ಸಹಸ್ರಾದಿಪತಿಯು ಅನೇಕ ವರ್ಷಗಳಿಂದ ಈ ಹುದ್ದೆಯಲ್ಲಿ ಮುಂದುವರೆದಿದ್ದರಿಂದ, ಯೆಹೂದ್ಯರ ಈ ಒಳಸಂಚನ್ನು[32] ಪೂರ್ಣವಾಗಿ ಅರ್ಥ ಮಾಡಿಕೊಳ್ಳುವ ಅನುಭವವನ್ನು ಹೊಂದಿದ್ದನು. ಆ ಹುಡುಗನು ಮಾತನಾಡುವಾ ಗಲೇ ಸಹಸ್ರಾಧಿಪತಿಯ, ತನ್ನ ನಿರ್ಧಾರದ ಆಯ್ಕೆಯನ್ನು ಮಾಡಿದ್ದನು:[33] ಹಿರಿಸಭೆಯಯ ಮನವಿಯನ್ನು ಮನ್ನಣೆ ಮಾಡುವ ಒಂದು ಆಯ್ಕೆ. ಅವನು ಇದನ್ನು ಮಾಡಿದರೆ, ಕಷ್ಟಕರ ವಾದ ತೊಂದರೆಯಿಂದ ಪಾರಾಗುತ್ತಿದ್ದನು - ಆದರೆ ಒಬ್ಬ ಖೈದಿಯನ್ನು[34] ಕಳಕೊಂಡನು ಎಂಬ ದಾಖಲಾತಿಯನ್ನು ಹೊಂದುತ್ತಿದ್ದನು, ಹೇಗೂ ಅವನು ಮನಸ್ಸಾಕ್ಷಿಯನ್ನು ಹೊಂದಿದ್ದ ಮನುಷ್ಯನಾಗಿದ್ದನು. ಇನ್ನೊಂದು ಆಯ್ಕೆ ಏನೆಂದರೆ, ಹಿರಿ ಸಭೆಯವರ ಯೋಜನೆಯನ್ನು ಒಪ್ಪಿಕೊಂಡಂತೆ ನಟಿಸಿ, ಸಾಕಷ್ಟು ಸಿಪಾಯಿಗಳನ್ನು ಕಳುಹಿಸಿ, ಆ ಕೊಲೆಗಾರರನ್ನೆಲ್ಲಾ ಕೊಲ್ಲುವ ಸಾಧ್ಯತೆ ಇತ್ತು. ಹೇಗೂ ಸಂಭವಿಸಬಹುದಾದ ಒಂದು ದುರ್ಗಟನೆಯನ್ನು ತಪ್ಪಿಸುವ ಸಾಧ್ಯತೆಯಿತ್ತು. ಆಖೈದಿಯನ್ನು ಆದಷ್ಟು ಬೇಗನೆ ಹಾಗೂ ಸದ್ದಿಲ್ಲದೆ ಸಾಗಹಾಕಬೇಕಿತ್ತು.

ಅಧಿಕಾರಿಯು ತನ್ನ ಮನಸ್ಸಿನಲ್ಲಿ ನಿರ್ಧರಿಸಿ, ಆ ವರ್ತಮಾನ ತಂದವನನ್ನು ಹೊರಕ್ಕೆ ಕಳುಹಿಸಿದನು, "ಆಗ ಸಹಸ್ರಾಧಿಪತಿಯು ಆ ಯೌವನಸ್ಥನಿಗೆ - ಈ ಸಂಗತಿಗಳನ್ನು ನನಗೆ ಸೂಚಿಸಿದ್ದನ್ನು ನೀನು ಯಾರಿಗೂ ಹೇಳಬೇಡವೆಂದು ಖಂಡಿತವಾಗಿ ಅಪ್ಪಣೆಕೊಟ್ಟು ಅವನನ್ನು ಕಳಹಿಸಿಬಿಟ್ಟನು" (ವಚನ 22). ಅವನು ಕಾರ್ಯನಿರತನಾಗುವ ಮೊದಲೇ ಆ ವಿಚಾರವನ್ನು ಅವನು ತಿಳಿದುಕೊಂಡನೆಂದು, ಹಿರಿ ಸಭೆಯವರು ತಿಳಿಯಬಾರದೆಂದು ಬಯಸಿದನು. ಇದರಿಂದ ದಂಗೆ ಆಗುವದನ್ನು ತಡೆಯುವ ಸಾಧ್ಯತೆಯಿತ್ತು. ಅವನ ಕಾರ್ಯದಲ್ಲಿ ರಾಜ ಕೀಯ ಹಾಗೂ ಸೈನಿಕ ನಿಪುಣತೆಯಿತ್ತು.

### ಆ ಒಳಸಂಚು ನಿಷ್ಫಲವಾಯಿತು (ವಚನಗಳು 23-35)

> ಆ ಮೇಲೆ ಅವನು ಶತಾಧಿಪತಿಗಳಲ್ಲಿಇಬ್ಬರನ್ನು ಕರೆಯಿಸಿ - ರಾತ್ರಿ ಒಂಭತ್ತು ಘಂಟೆಗೆ ಕೈಸರೈಯದ ತನಕ ಹೋಗುವಂತೆ ಇನ್ನೂರು ಮಂದಿ ಸಿಪಾಯಿಗಳನ್ನೂ ಎಪ್ಪತ್ತು ಮಂದಿ ಸವಾರರನ್ನೂ ಇನ್ನೂರು ಮಂದಿ ಭಲ್ಲೆಯವರನ್ನೂ ಸಿದ್ಧಮಾಡಿರಿ;[35] ಮತ್ತು ಕುದುರೆಗಳನ್ನು[36] ಸಿದ್ಧಮಾಡಿ ಪೌಲನನ್ನು ಹತ್ತಿಸಿ[37] ದೇಶಾಧಿಪತಿಯಾದ ಫೇಲಿಕ್ಸನ ಬಳಿಗೆ ಸುರಕ್ಷಿತವಾಗಿ ಕರೆದು ಕೊಂಡು ಹೋಗಬೇಕೆಂದು ಹೇಳಿದನು. ಇದಲ್ಲದೆ ಈ ಕೆಳಗಣ ಅಭಿಪ್ರಾಯದ ಒಂದು ಕಾಗದವನ್ನು ಬರೆದನು[38] (ವಚನಗಳು 23, 24).

ಒಬ್ಬ ಖೈದಿಯನ್ನು ಸಾಗ ಹಾಕಲು, ಸಹಸ್ರಾಧಿಪತಿಯು 470 ಜನರನ್ನು ಕಳಿಹಿಸಿದನು. ಅವನ ಕೈಕೆಳಗಿದ್ದ ಸುಮಾರು ಅರ್ಧದಷ್ಟು ಜನರನ್ನು ಕಳುಹಿಸಿದನು![39] "ಪೌಲನನ್ನು ನಾಶಮಾಡಲು ಯೆಹೂದ್ಯರು ಎಷ್ಟು ದೂರ ಸಾಗಿದ್ದರೆಂದು" ನಾವು ತಿಳಿದಿರವೆವು; ಈಗ, ನ್ಯಾಯವಾದ ತೀರ್ಪನ್ನು ನೀಡಲು, ರೋಮಾಯದ ಅಧಿಕಾರಿಗಳು ಎಷ್ಟು ದೂರ ಹೋಗಿದ್ದರೆಂದು ತಿಳಿಯುತ್ತೇವೆ.[40] ಈಗ ಪೌಲನನ್ನು ರೋಮಾಯದ ಸಂಸ್ಥಾನಕ್ಕೂ, ಹಾಗೂ ದೇಶಾಧಿಪತಿಯ ಬಳಿಗೂತರಲು, ಅವರು ಕೈಸರೈಯಕ್ಕೆ ಕರೆದೊಯ್ಯಬೇಕಿತ್ತು.[41]

ನಾನು ಸ್ವಲ್ಪ ತೆಗೆದು, ಕೆಲವು ಪ್ರಶ್ನೆಗಳನ್ನು ಕೇಳುತ್ತೇನೆ: ಈ ಒಳಸಂಚಿನ ಕುರಿತ ಸುದ್ಧಿಯನ್ನು ತಿಳಿದವನು, ಪೌಲನಿಗೆ ಅದನ್ನು ತಲುಪಿಸುವಷ್ಟು ಚಿಂತಕನಾಗಿದ್ದನೇ? ಅಥವಾ ಇದರ ಮೂಲಕ ಪೌಲನು ಅತಿಥಿಗಳನ್ನು ಸಂಧಿಸಿ, ಮತ್ತು ಈ ಸುದ್ಧಿಯನ್ನು ಸಹಸ್ರಾಧಿಪತಿಗೆ ತಲುಪಿಸಲು ಅವಕಾಶಮಾಡಿಕೊಂಡನೇ? ಅಥವಾ ಸೈನ್ಯದ ಅಧಿಕಾರಿಯು, ಒಪ್ಪಂದಕ್ಕೆ ಬರುವಂತ ಮನಸ್ಸನ್ನು ಹೊಂದಿ, ಆ ಯೌವನಸ್ಥನ ಮಾತಿನ ದೆಸೆಯಿಂದ ಪೌಲನನ್ನು ಸಂರಕ್ಷಿಸುವ ಕಾರಣವಾಯಿತೇ? ಅಥವಾ ಪೌಲನು ಕೈಸರೈ ಯಕ್ಕೆ ಹೋಗಿ ಕೈಸರನ ಮುಂದೆ ನ್ಯಾಯತೀರ್ಪಿಗಾಗಿ ನಿಲ್ಲುವ ಹಾಗೂ ಬಿಡುಗಡೆಯಾಗಿ (25:11) ರೋಮಾಯಕ್ಕೆ ತಲುಪುವ ಅವಕಾಶವಾಯಿತೆ? ಈ ಪ್ರಶ್ನೆಗಳಿಗೆ ಉತ್ತರವೇನೆಂದರೆ, "ಇಲ್ಲ" ಎಂಬದೇ. ಇವೆಲ್ಲವೂ ದೇವರು ನೀಡಿದ ಪರಾಮರಿಕೆಯಾಗಿದೆ!

ಆ ಖೈದಿಯನ್ನು ಸಾಗ ಹಾಕಲು ಸಕಲ ಏರ್ಪಾಟುಗಳು ನಡೆದ ನಂತರ, ಸಹಾಸ್ರಾಧಿಪತಿಯು, ದೇಶಾಧಿಪತಿಗೆ ಒಂದು ಪತ್ರವನ್ನು ಬರೆದನು. ಪೌಲನು ಎಸೆಗಿದ ತಪ್ಪಿನ ಸ್ಪಷ್ಟತೆಯು ಇರದೆ ಇದ್ದದ್ದರಿಂದ, ಆ ಪತ್ರವನ್ನು ಬರೆಯುವದು ಸುಭವಾಗಿರಲಿಲ್ಲ.

> ಇದಲ್ಲದೆ ಈ ಕೆಳಗಣ ಅಭಿಪ್ರಾಯದ ಒಂದು ಕಾಗದವನ್ನು[42] ಬರೆದನು, ಏನೆಂದರೆ:[43]
>
> ಮಹಾರಾಜರಾಜಶ್ರೀ ದೇಶಾಧಿಪತಿಯಾದ ಫೇಲಿಕ್ಸನಿಗೆ ಕ್ಲೌದ್ಯ ಲೂಸ್ಯನು[44] ಮಾಡುವ ವಂದನೆ.[45] ಯೆಹೂದ್ಯರು ಈ ಮನುಷ್ಯನನ್ನು ಹಿಡಿದು ಕೊಲ್ಲಬೇಕೆಂದಿದ್ದಾಗ ನಾವು ಸಿಪಾಯಿಗಳೊಂದಿಗೆ ಹೋಗಿ ಅವನನ್ನು ರೋಮಾಪುರದ ಹಕ್ಕುದಾರನೆಂದು ತಿಳಿದು ಅವನನ್ನು ತಪ್ಪಿಸಿದೆನು. ಇದಲ್ಲದೆ ಅವನ ಮೇಲೆ ತಪ್ಪು ಹೊರಿಸಿದ ಕಾರಣವನ್ನು ತಿಳಿಯಲಪೇಕ್ಷಿಸಿ ಅವನನ್ನು ಅವರ ಹಿರೀ ಸಭೆಗೆ ಕರೆದುಕೊಂಡುಹೋದೆನು. ಅಲ್ಲಿ ಅವರು ತಮ್ಮ ಧರ್ಮಶಾಸ್ತ್ರ[46] ವಿಷಯಗಳನ್ನು ಹಿಡಿದು ಅವನ ಮೇಲೆ ತಪ್ಪು ಹೊರಿಸಿದರೇ ಹೊರತು ಮರಣ ದಂಡನೆಗಾಗಲಿ ಬೇಡಿಗಾಗಲಿ ಆಧಾರವಾದ ಯಾವ ಅಪರಾಧವನ್ನೂ ಹೊರಿಸಲಿಲ್ಲವೆಂದು ನನಗೆ ಕಂಡುಬಂತು. ಈ ಮನುಷ್ಯನಿಗೆ ವಿರುದ್ಧವಾಗಿ ಒಳಸಂಚು ಹುಟ್ಟಿತೆಂದು ನನಗೆ ತಿಳಿದು ಬಂದದರಿಂದ ಕೂಡಲೆ ನಾನು ಅವನನ್ನು ನಿನ್ನ ಬಳಿಗೆ ವಿರುದ್ಧವಾಗಿ ಮಾತಾಡುವ ಹಾಗೆ ಅಪ್ಪಣೆ ಕೊಟ್ಟೆನು ಎಂಬದೇ (ವಚನಗಳು 25-30).

ಆ ಪತ್ರದ ಕೈ ಚಳಕದ ಒಕ್ಕಣೆಯು ಮೋಹಗೊಳಿಸುವಂತ ನಿದರ್ಶನವಾಗಿದೆ.[47] ಸಹಾಸ್ರಾಧಿಪತಿಯು, ಪೌಲನನ್ನು ಕಾಪಾಡಿದ ಸಂಗತಿಯು ಸತ್ಯವೇ, ಆದರೆ, ಅವನು ರೋಮಾ ಹಕ್ಕುದಾರನಾದ್ದರಿಂದ ಕಾಪಾಡಲಿಲ್ಲ. ದಂಗೆಯನ್ನು ಹತ್ತಿಕ್ಕುವ ಕಾರಣದಿಂದ ಮಾಡಿದನು. ಪೌಲನನ್ನು ಹೊಡೆಯುವರೆಗೂ, ಅವನು ರೋಮಾಯದ ಹಕ್ಕುದಾರನೆಂದು ಅವನು ತಿಳಿಯಲಿಲ್ಲ - ಅವನು ನೀಡಿದ ವಿವರಣೆಯಲ್ಲಿ ಸತ್ಯಾಂಶವು ಇಲ್ಲದಾಯಿತು. ಅಧಿಕಾರಿಯು ಪತ್ರವನ್ನು ಕೈಸರೈಯನಿಗೆ ರವಾನೆ ಮಾಡುವಾಗ, ಅವನ ವಿರೋಧಿಗಳು ಸಹ ಅವನಲ್ಲಿಗೆ ಹೋಗಿ ಪೌಲನ ವಿರುದ್ಧ ಪಿರ್ಯಾದಿ ಸಲ್ಲಿಸಬೇಕೆಂದು ಅವರಿಗೆ ಹೇಳಲಿಲ್ಲ. ಪೌಲನು ಸುರಕ್ಷಿತನಾಗಿ ಇದ್ದದರಿಂದ, ಅಧಿಕಾರಿಯು ಮರುದಿನದವರೆಗೂ ಕಾದುಕೊಂಡನು.[48]

ಹೇಗೂ ಲೂಕನು ಈ ಪತ್ರವನ್ನು ಸೇರಿಸಿರುವದಿಲ್ಲ - ಇದು ಸತ್ಯವೇದದಲ್ಲಿನ ಲೌಕಿಕವಾದ ಒಂದೇ ಪತ್ರವಾಗಿದೆ - ರೋಮಾಯ ಅಧಿಕಾರಿಯನ್ನು ಅವಮಾನಪಡಿಸುವದಕ್ಕಾಗಿರದೇ, ಅದನ್ನು ಸ್ಥಿರಪಡಿಸಿದ ಪದಪ್ರಯೋಗ ಮಾಡಿದನು: "ಅವರ ನಿಯಮದ ಕುರಿತು ಪ್ರಶ್ನೆ ಅನಗತ್ಯವಾಗಿತ್ತು, ಪೌಲನು ಮರಣವನ್ನಾಗಲೀ ಅಥವಾ ಸೆರೆಮನೆ ಶಿಕ್ಷೆಯನ್ನಾಗಲೀ ಹೊಂದುವಂಥ, ಯಾವುದೇ ಅಪರಾ ಧವನ್ನು ಮಾಡಿರಲಿಲ್ಲ."[49] ಪೌಲನು ಮಾಡಿರಬಹುದಾದ ವಿಷಯಗಳ ಕುರಿತು, ಸಹಸ್ರಾಧಿಪತಿಯು ಗೊಂದಲ ಹೊಂದಿದ್ದರೂ, ಅಲ್ಲಿ ರಾಜಕೀಯ ಸಂಗತಿಗಳಿಗಿಂತಲೂ, ದೈವ ಶಾಸ್ತ್ರದ ತರ್ಕದ ಭಿನ್ನಾಭಿಪ್ರಾಯವಾಗಿತ್ತು. ರೋಮಾಯದ ನಿಯಮದ ಪ್ರಕಾರ, ಪೌಲನು ಮರಣವನ್ನಾಗಲಿ ಅಥವಾ ಸೆರೆಮನೆಯ ವಾಸವನ್ನಾಗಲಿ ಹೊಂದುವ ಅಗತ್ಯವಿರಲಿಲ್ಲ.[50] ಇನ್ನೊಂದು ಅರ್ಥದಲ್ಲಿ ಪೌಲನು ಅಪರಾಧಿಯಾಗದೇ ಇದ್ದದರಿಂದ, ಅವನನ್ನು ಬಿಡುಗಡೆ ಮಾಡಬೇಕಿತ್ತು.

ಸಕಲ ಸಿದ್ಧತೆಗಳಾದ ನಂತರ, ಸೈನ್ಯದ ಚಿಕ್ಕ ತುಕಡಿಯೊಂದು ಯೆರೂಸಲೇಮಿನ ಉತ್ತರ ಪ್ರಾಂತಕ್ಕೆ ಬೆಟ್ಟಗಳ ಮೂಲಕ ಹಾದು ಹೋದರು.[51] ಪೌಲನು 470 ಸಿಪಾಯಿಗಳನ್ನು ಹೊಂದಿದ್ದನು. ಕರ್ತನು ಸಹ ಅವನೊಂದಿಗೆ ಇದ್ದದ್ದರಿಂದ ಆ ಸಂಖ್ಯೆಯು 471 ಆಗುತ್ತದೆ. "ತೊಂದರೆ ಉಂಟಾಗಬಹುದಾದ ಸ್ಥಳದಿಂದ ರಾತ್ರಿ[52] ಕಾಲದಲ್ಲಿ ಪೌಲನನ್ನು ಅಂತಿಪತ್ರಿಗೆ ಕರೆದುಕೊಂಡು ಹೋದರು"[53] (ವಚನ 31). ಅಂತಿಪತ್ರವು ಸೈನ್ಯದ ಠಾಣೆಯಾಗಿತ್ತು. ಯೆರೂಸಲೇಮಿನಿಂದ ಸುಮಾರು ಮೂವತ್ತ - ಐದು ಮೈಲುಗಳ, ಕೈಸರೈಯದ[54] ಮಧ್ಯಭಾಗದ, ಯುದಾಯ ಹಾಗೂ ಸಮಾರ್ಯದ ನಡುವೆ ನೆಲೆಗೊಂಡಿತ್ತು.

ಸಹಸ್ರಾಧಿಪತಿಯು ನಿರೀಕ್ಷಿಸಿದಂತೆ, ಅವರು ರಾತ್ರಿಕಾಲದಲ್ಲಿ ಪ್ರಯಾಣಮಾಡಿ, ಪೌಲನ ವೈರಿಗಳಿಂದ ತಪ್ಪಿಸಿಕೊಂಡರು. ಅವರು ಅಂತಿಪತ್ರವನ್ನು ತಲುಪಿದಾಗ, ವೈರಿಗಳು ಅಡಗಿಕೊಳ್ಳಬಹುದಾದ ಬೆಟ್ಟ ಪ್ರದೇಶದಿಂದ ಪಾರಾಗಿದ್ದರು; ಅವರ ಮುಂದೆ ಸಮತಟ್ಟಾದ ಪ್ರದೇಶವಿತ್ತು. ಆದ್ದರಿಂದ, ಮರುದಿನ (ಅಲ್ಪ ವಿಶ್ರಾಂತಿಯ ನಂತರ), 400 ಜನ ಸಿಪಾಯಿಗಳು, ಹಾಗೂ ಈಟಿ ಹಿಡಿದವರು, ಕೈಸರೈಯಕ್ಕೆ ಪೌಲನನ್ನು ಸವಾರ ರೊಂದಿಗೆ ಕಳುಹಿಸಿ, ತಮ್ಮ ಶಾಂತಿ ಕಾಪಾಡುವ ಕರ್ತವ್ಯಕ್ಕಾಗಿ ಯೆರೂಸಲೇಮಿಗೆ ಪುನಃ ಹಿಂದಿರುಗಿದರು (ವಚನ 32).

ಈಗ ಎಲ್ಲರೂ ಕುದುರೆಯ ಮೇಲೆ ಇದ್ದದ್ದರಿಂದ, ಕೈಸರೈಗೆ ಹೋಗಬೇಕಾದ 25 ಮೈಲುಗಳ ಅಂತರವನ್ನು ವೇಗವಾಗಿ ದಾಟಿದರು. ಅವರು ಆ ದಾರಿಯಲ್ಲಿ ಹೋಗುವಾಗ, ಎರಡು ವಾರಗಳ ಹಿಂದೆ ಪೌಲ ಮತ್ತು ಅವನ ಸಂಗಡಿಗರು ಆ ಹಾದಿಯಲ್ಲಿ ಸಂಚಲಿಸಿದ್ದನ್ನು ಪೌಲನು ನೆನಪುಮಾಡಿಕೊಂಡನು. ಆ ದಿವಸಗಳಲ್ಲಿ ನಡೆದ ಘಟನಾವಳಿಗಳನ್ನು ನೆನಪು ಮಾಡಿ, ಅವನು ಆಶ್ಚರ್ಯಪಟ್ಟನು. ಆದರೆ ಈಗ ಬದಲಾದ ಸನ್ನಿವೇಶದಲ್ಲಿದ್ದನು.

ಅಂತಿಮವಾಗಿ, ಆ ಗುಂಪು ಕೈಸರೈಯನ್ನು ತಲುಪಿದರು. ಎಪ್ಪತ್ತಕ್ಕಿಂತಲೂ ಅಧಿಕ ಜನರು ಪಟ್ಟಣದಲ್ಲಿ ಸವಾರಿ ಮಾಡುತ್ತಾ ಬರುವಾಗ, ಅಲ್ಲಿ ಜನರು ಗುಂಪಾಗಿ ಕೂಡಿ ಬಂದಿರಬಹುದು. ಎಪ್ಪತ್ತು ಸಿಪಾಯಿಗಳ ನಡುವೆ ಇದ್ದ ಪೌಲನನ್ನು ಗಮನಿಸಿದ, ಯಾವುದೇ ಕ್ರೈಸ್ತನು, ಅಗಬನಿಂದ ಉಂಟಾದ ಪ್ರವಾದನೆಯನ್ನು ನೆನಪು ಮಾಡಿರಬಹುದು (21:10, 11).

"ಸವಾರರು ಕೈಸರೈಯಕ್ಕೆ ಸೇರಿ ದೇಶಾಧಿಪತಿಗೆ ಕಾಗದವನ್ನು ಒಪ್ಪಿಸಿ ಪೌಲನನ್ನು ಅವನ ಮುಂದೆ ನಿಲ್ಲಿಸಿದರು" (ವಚನ 33). "ದೂಳಿನಲ್ಲಿ ಪ್ರಯಾಣಮಾಡಿ ಕೈಕಾಲುಗಳಲ್ಲಿ ಬೇಡಿ ಗಳಿದ್ದರೂ, ಫೇಲಿಕ್ಸನ ಮುಂದೆ ಪೌಲನು ಶಾಂತ ಮನಸ್ಸಿನಿಂದ ನಿಂತಿದ್ದನು."[55] ಮೊಟ್ಟ ಮೊದಲನೆಯ ಬಾರಿಗೆ, ಆದರೆ ಕಡೇಯ ಸಾರಿಯಲ್ಲ, ಅಲ್ಪನಾದ ಯೆಹೂದ್ಯನು ಪಾಲಿಸ್ತೇನಿನ ಶಕ್ತಿವಂತನಾದ ರಾಜಕೀಯ ವ್ಯಕ್ತಿಯ ಮುಂದೆ ನಿಂತಿದ್ದನು.

ದೇಶಧಿಪತಿಯು, ಸಹಸ್ರಾಧಿಪತಿಯ ಪತ್ರವನ್ನು ಓದಿದ ನಂತರ, ಆಯಾಸಗೊಂಡ ಆ ಪ್ರಯಾಣಿಕನನ್ನು ಮೇಲೆ ಕೆಳಗೆ ನೋಡಿರಬಹುದು, ಮತ್ತು ಈ ನಿರೂಪದ್ರವಿಯಾದ

ಯೆಹೂದ್ಯನು ಅಂತಹ ಒಂದು ಕಲಹವನ್ನು ಹೇಗೆ ಮಾಡಿದನೆಂದು ಆಶ್ಚರ್ಯ ಪಟ್ಟಿರಬಹುದು. ನಂತರ ಅಧಿಕಾರಿಯು, "ಪೌಲನು ಯಾವ ಸೀಮೆಯವನು? ಎಂದು ಕೇಳಿ ಅವನು ಕಿಲಿಕ್ಯದವನು ಎಂದು ತಿಳಿದು" (ವಚನ 34ಎ).[56] ಅದು ರೋಮಾಯ ಪ್ರಾಂತದಲ್ಲಿತ್ತು (ವಚನ 24ಬಿ). ಈಗ ಅವನು ನ್ಯಾಯಯುತವಾದ ವಿಚಾರಣೆ ಮಾಡಲು ಸಾಧ್ಯವಾಯಿತು. "ನಿನ್ನ ಮೇಲೆ ತಪ್ಪು ಹೊರಿಸುವವರು ಬಂದ ನಂತರ ನಿನ್ನ ಕಾರ್ಯವನ್ನು ಪೂರ್ಣವಾಗಿ ವಿಚಾರಿಸುತ್ತೇನೆ"[57] ಅಂದನು (ವಚನ 35ಎ).

ಪೌಲನನ್ನು ಸಾಮಾನ್ಯವಾದ ಸೆರೆಮನೆಯಲ್ಲಿರಿಸದೆ, "ಹೆರೋದನ ಅರಮನೆಯಲ್ಲಿಟ್ಟನು"[58] (ವಚನ 35ಬಿ). ಹೆರೋದನು ಈ ಅರಮನೆಯನ್ನು ಕಟ್ಟಿದ್ದರಿಂದ, ಅದಕ್ಕೆ ಅವನ ಹೆಸರನ್ನೆ ಇಟ್ಟದ್ದರು. ಈಗ ಅದು ದೇಶಾಧಿಪತಿಯ ಅಧಿಕೃತ ಕಚೇರಿಯಾಗಿತ್ತು. ದೇವರ ಪರಾಂಬರಿಕೆಯಲ್ಲಿ ಈ ಸ್ಥಳವು ಮುಂದಿನ ಎರಡು ವರ್ಷಗಳ ಕಾಲ ಪೌಲನಿಗೆ ತಂಗುವ ಸ್ಥಳವಾಯಿತು (24:27).

ಪೌಲನನ್ನು ಕೊಲ್ಲುವವರೆಗೆ ಅನ್ನಪಾನಗಳನ್ನು ತೆಗೆದುಕೊಳ್ಳುವದಿಲ್ಲ ಎಂಬ ಶಪಥಮಾಡಿದ ಜನರ ಕುರಿತಾಗಿ ಏನು? ಪೌಲನು ಪುನಃ ಅವರ ಕೈಯಿಂದ ತಪ್ಪಿಸಿಕೊಂಡನೆಂದು ತಿಳಿದು, ಅವರಲ್ಲಿ ಉಂಟಾದ ಕ್ರೋಧದ ಬಗ್ಗೆ ಊಹಿಸಬಹುದೇ? ಒಂದು ವೇಳೆ ಅವರು ಮಾಡಿದ ಶಪಥದ ಪ್ರಕಾರ ಅವರು ಇದ್ದಿದ್ದರೆ, ಅವರಿಗೆ ಅತಿಯಾದ ಹಸಿವಾಗಿರಬಹುದು! ಈ ಯೆಹೂದ್ಯರು ತಾವು ಮಾಡಿಕೊಂಡ ಶಪಥದ ನಿಮಿತ್ತ ಪರಿತಾಪ ಪಟ್ಟಿರಬಹುದು. ಅವರು ಊಟಮಾಡಿರಲಾರರು ಎಂಬ ವಿಚಾರದಲ್ಲಿ ನನಗೆ ಸಂದೇಹವಿದೆ. "ದೇವರಿಗೆ ವಿರೋಧವಾಗಿ ಮಾಡಿದ ಯಾವುದೇ ಯೋಜನೆಗಳು ಸಫಲವಾಗುವದಿಲ್ಲ ವೆಂದು" (ಜ್ಞಾನೋಕ್ತಿ 21:30; NIV) ಅವರು ತಿಳಿದಿರಬಹುದೆಂದು ನಾನು ಊಹಿಸುತ್ತೇನೆ. ಅದರಲ್ಲಿಯೂ ಸಂದೇಹವಿದೆ.

## ಮುಕ್ತಾಯ

ದೇವರು ಸಕಲವನ್ನು ತನ್ನ ಹತೋಟಿಯಲ್ಲಿಡುವನೆಂಬದು ನಮ್ಮ ಪಾಠದ ತಾತ್ಪಾರ್ಯ ವಾಗಿದೆ. ಪೌಲನ ನಿರೀಕ್ಷೆಗೆ ಇದು ಅತ್ಯಗತ್ಯವಾಗಿ ತಿಳಿಯುವ ಅಂಶವಾಗಿತ್ತು - ಹಾಗೇ ಯೇ, ನಮಗೂ ಅಗತ್ಯವಿದೆ! ಅಗಸ್ಟಿಯನ್ನನ ಹೇಳಿಕೆ ಏನೆಂದರೆ, "ದೇವರ ಕರುಣೆಯಿಂದ ಭೂತಕಾಲದಲ್ಲಿ ಭರವಸವಿಡಿರಿ, ವರ್ತಮಾನವನ್ನು ಆತನ ಪ್ರೀತಿಯಲ್ಲಿ ನೋಡಿರಿ, ಭವಿಷ್ಯವನ್ನು ಆತನ ಪರಾಮರಿಕೆಯಲ್ಲಿ ಕಾಣಿರಿ."[59] ದೇವರು ನಮ್ಮ ಜೀವಿತದಲ್ಲಿ ಕೆಲಸ ಮಾಡುತ್ತಿರುವನೆಂದು ದಿನೇ ದಿನೇ ನಾವು ಗಳು ಹೇಳಲು ಸಾಧ್ಯವಿಲ್ಲ, ಆದರೆ ಆತನು ಮಾಡುವನೆಂಬ ಭರವಸೆಯಿಂದ ಸಮಾಧಾನ ಹೊಂದಬಹುದು. ಎಡ್ ವಾರ್ಟರ್ ಹೇಳಿಕೆಯಂತೆ, "ದೇವರ ಪರಾಂಬಿಕೆಯು ನಮ್ಮ ಜೀವಿತದ ಒಂದು ಪುಸ್ತಕವಿದ್ದಂತೆ, ಕಲವು ಭಾಷೆಗಳಲ್ಲಿರುವಂತೆ ಅದನ್ನು ಹಿಂಭಾಗದಿಂದ ಓದಬೇಕು, ಆಗ ಮಾತ್ರ ನಾವು ಕ್ರೈಸ್ತರಾಗಲು ಸಾಧ್ಯ"[60] ಏನೇ ಸಂಭವಿಸಿರೂ, ಆತನಲ್ಲಿ ಭರವಸೆಯಿಡಿರಿ, ಕೀರ್ತನೆಗಾರನ ಸಂಗಡ "ಕರ್ತನಾದ ಯೆಹೋವನೇ, ನನ್ನ ನಿರೀಕ್ಷೆಯೂ, ಭರವಸವೂ ನೀನಲ್ಲವೋ" ಎಂದು ಹೇಳ ಬಹುದೆ (ಕೀರ್ತನೆ 71:5).

ಇದನ್ನು ಮುಕ್ತಾಯಗೊಳಿಸುವಾಗ, ಕ್ರೈಸ್ತರಲ್ಲದವರಿಗೆ ಒಂದು ವಿಶೇಷ ಮನವಿಮಾಡು ತ್ತೇನೆ. ಇದರಲ್ಲಿ ಯಾವುದೇ ಅದ್ಭುತಗಳಿದಿದ್ದರೂ, ದೇವರ ಪರಾಂಬರಿಕೆಯನ್ನು ನಿಮ್ಮ ಬಳಿಗೆ ತರಲಾಗಿದೆ. ಈ ನುಡಿಗಳನ್ನು ನೀವುಗಳು ಒಪ್ಪಿಕೊಳ್ಳುವದು ಆಕಸ್ಮಿಕವಾಗಿದೆಯೇ? ನಿಶ್ಚಯ ವಾಗಿಯೂ ಇಲ್ಲ. ನೀವು ದೇವರ ಮಕ್ಕಳಾಗಬೇಕೆಂದು ಆತನು ಬಯಸುತ್ತಾನೆ! ಇದನ್ನು ನೀವು ಏಕೆ ಮಾಡಬಾರದು?

ಟಿಪ್ಪಣಿಗಳು

[1]ನಿರೀಕ್ಷೆ ಕಳಕೊಂಡವರ ಸನ್ನಿವೇಶಕ್ಕೆ ಅನುಗುಣವಾಗಿ ಹೇಳಬಹುದು. [2]ಅಪೊಸ್ತಲರ ಕೃತ್ಯಗಳು ಅಂತ್ಯದ ಅಧ್ಯಾಯಗಳಲ್ಲಿ "ನಿರೀಕ್ಷೆ" ಎಂಬುದು ಪ್ರಮುಖ ಪದವಾಗಿದೆ (23:6; 24:15; 26:6, 7; 28:20). [3]G. Campbell Morgan, *The Acts of the Apostles* (Grand Rapids, Mich.: Fleming H. Revell, 1988), 379. [4]ಅವನು ಯೆರೂಸಲೇಮಿನಲ್ಲಿ ಹಿಂಸೆಯನ್ನು ಅನಭವಿಸಿದಾಗ, ಸ್ಥಳೀಯರು ಅವನಿಗ ಆರ್ಥಿಕ ಸಹಾಯ ನೀಡದಿದ್ದರೂ, ಪೇತ್ರನಿಗೆ ಮಾಡಿದಂತೆ (12:5), ದೇವ ಸಭೆಯು ಅವನಿಗಾಗಿ ಪ್ರಾರ್ಥನೆ ಮಾಡಿರಬಹುದು. [5]ಯೇಸುವಿಗೆ ಉಂಟಾದ ವಿಷಯಗಳಿಗೆ, ಪೌಲನ ಯೋಚನೆಗಳನ್ನು ಹೋಲಿಸಲು ಸಾಧ್ಯವಿಲ್ಲ. ಯೇಸುವಿನ ಮಾತುಗಳಿಂದ ಪೌಲನಿಗೆ ತಕ್ಕ ಉತ್ತೇಜನವಾಯಿತು. [6]"ಅವನ ಬಳಿಯಲ್ಲಿ" ನಿಜ ಸಂಗತಿ ಹಾಗೂ ಸಂಕೇತದಮಾತು ಎಂದು ತಿಳಿಯಬಹುದು. ದೇವರು ಅವನನ್ನು ಕೈ ಬಿಡಲಿಲ್ಲ ಎಂಬ ಸಂಗತಿಯೇ (2 ತಿಮೊಥೆ 4:16, 17); "ನನ್ನನ್ನು ಎಲ್ಲರೂ ತೊರೆದರೂ, ಕರ್ತನು ನನ್ನ ಬಳಿಯಲ್ಲಿದ್ದನು" ಎಂದು ಪೌಲನು ಹೇಳಿದನು. [7]KJVಯಲ್ಲಿ "ಸಂತೋಷವಾಗಿರು" ಗ್ರೀಕ್‌ನಲ್ಲಿ "ಧೈರ್ಯವಾಗಿರು" ಎಂಬುದಾಗಿದೆ. [8]ಅಭಿಪ್ರಾಯದಲ್ಲಿ, ಅವನು ತನ್ನನ್ನು ಸಮರ್ಥಿಸಿಕೊಂಡನು, ಪ್ರಾಯೋಗಿಕವಾಗಿ, ಅವನು ಕರ್ತನಿಗೆ ಸಾಕ್ಷಿಯಾಗಿದ್ದನು. [9]"ರೋಮಾಯದಲ್ಲೂ ಸಾಕ್ಷಿಯಾಗಿರಬೇಕು," ಅಪೊಸ್ತಲರ ಕೃತ್ಯದ ಕೊನೆಯ ಮುಕ್ಕಾಲು ಭಾಗದ ಸಾರಾಂಶವಾಗಿದೆ (Halford E. Luccock, *The Acts of the Apostles in Present-Day Preaching* [Chicago: Willett, Clark & Co., 1942], 152). [10]Warren W. Wiersbe, *The Bible Exposition Commentary,* vol. 1 (Wheaton, Ill.: Victor Books, 1989), 495.

[11]Rick Atchley, ಕರ್ತನು ಹೀಗೆ ಸೂಚಿಸಿದನೆಂದು ಹೇಳಿದನು, "ನಾನು ಟಿಕೇಟ್‌ನ್ನು ಕೊಂಡುಕೊಂಡೆನು." ("Good Counsel From a Bad Council," Sermon preached at the Southern Hills church of Christ, Abilene, Texas, on 8 March 1987). [12]1 ಸಮುವೇಲ 14:24 ಮತ್ತು 2 ಸಮುವೇಲ 3:35. 1 ಅರಸು 19:2ಕ್ಕೆ ಹೋಲಿಸಿ. [13]"ಯೆರೂಸಲೇಮಿನಲ್ಲಿ ತಿರಸ್ಕಾರ" ಎಂಬ ಪಾಠವನ್ನು ನೋಡಿ. [14]*ಅಪೊಸ್ತಲರ ಕೃತ್ಯಗಳು, 1ನೇ* ಪುಸ್ತಕದಲ್ಲಿ "ಸೈತಾನನು ನಿಮಗೆ ಕಠಿಣವಾದ ಸಮಯವನ್ನು ಎದುರುಮಾಡಿದಾಗ" ಎಂಬ ಪಾಠದಲ್ಲಿ "ಮಹಾಯಾಜಕರ" ಮೇಲಿರುವ ಸೂಚನೆಗಳನ್ನು ನೋಡಿರಿ. [15]ಪೌನಿಗೆ ಈ ಹಿಂದೆ ಸಹಾಯ ಮಾಡಿದ ಫರಿಸಾಯರು ದಂಗೆ ಎದ್ದವರಲ್ಲಿ ಇರಲಿಲ್ಲ. ಹಿರೀ ಸಭೆಯು ಸದ್ದುಕಾಯರ ವಶದಲ್ಲಿತ್ತು ಈ ಸಭೆಯ ಮೂಲಕ, ಸಹಸ್ರಾಧಿಪತಿಯನ್ನು ಕರೆಸಿ, ಪೌಲನನ್ನು ಅವರ ಮುಂದೆ ತರುವ ಯೋಜನೆಯಾಗಿತ್ತು. ಪೌಲನ ಕೊಲೆಯ ಒಳಸಂನ್ನು ಹೊರತುಪಡಿಸಿದ್ದರು, ಬಹುಶಃ ಫರಿಸಾಯರೂ ಇದನ್ನು ಒಪ್ಪಿರಬಹುದು. [16]ಒಳಸಂಚು ಮಾಡಿದವರೂ ಹಾಗೂ ಆಸಭೆಯವರೂ ಪೌಲನ ಮುಗ್ದತೆಯನ್ನು ಒಪ್ಪಿದ್ದರು. ಅಂದರೆ ಪೌಲನನ್ನು ನ್ಯಾಯಯುತವಾಗಿ ಶಿಕ್ಷಿಸಲು ಕಾರಣವಿರಲಿಲ್ಲ. [17]ಹಿರೀ ಸಭೆಗೆ, ಹಿಂದಿನ ದಿನವೇ ಸಿಪಾಯಿಗಳನ್ನು ಕರೆದಿರುವದಿಲ್ಲ, ಪೌಲನನ್ನು ಕಾಪಾಡಲು ಕರೆಸಿದ್ದನಷ್ಟೆ (23:27). [18]ವೆಸ್ಟರ್ನ್ ಟೆಕ್ಸ್ ವಚನ 15ರ ಅಂತ್ಯವನ್ನು, "ನಾವು ಅದಕ್ಕಾಗಿ ಸಾಯಬೇಕಾದರೂ" ಎಂದು ತಿಳಿಸಿದೆ ಕೊಲೆಪಾತಕರು ಯಾರೇ ಆಗಿರಬಹುದು ಇದಕ್ಕೆ ಒಡಂಬಡಬೇಕಿತ್ತು. [19]ಬೆಲೀವರ್ ಸುಪ್ರಸಿದ್ಧ ಸುವಾರ್ತಿಕು. [20]Quoted in Rick Atchley, "Evidence of Providence," Sermon preached at the Southern Hills church of Christ, Abilene, Texas, 15 March 1987.

[21]NASB ಹಾಗೂ KJVಯಲ್ಲಿ "ದೇವರು ಅನುಗ್ರಹಿಸುವನು" ಎಂದಿದೆ (ಆದಿಕಾಂಡ 22:8). [22]Atchleyಯಲ್ಲಿ ಪ್ರಸ್ತಾಪಿಸಲಾಗಿದೆ. [23]F. F. Bruce ಇದನ್ನು, "ಪೌಲನ ವೈಯಕ್ತಿಕ ಜೀವಿತದ ಬಗ್ಗೆ ಮತ್ತು ಕುಟುಂಬದ ಸಂಬಂಧದ ಬಗ್ಗೆ ಅರಿಯಲು ಕುತೂಹಲವುಳ್ಳವರಿಗೆ ಅಪೊಸ್ತಲರ ಕೃತ್ಯಗಳಲ್ಲಿ ಇದೊಂದು ನಿರಾಶದಾಯಕವಾದದೆಂದರು" (*The Book of Acts,* rev. ed. [Grand Rapids, Mich.: Wm. B. Eerdmans Publishing Co., 1988], 432). [24]ಪೌಲನ ಕುಟುಂಬದ ಕುರಿತ ಒಂದ ಹೇಳಿಕೆ. ರೋಮಾಪುರ 16:7, 21 ಬಹುಶಃ ಯೆಹೂದ್ಯರಿಗೆ ಸೂಚನೆ (ರೋಮಾಪುರ 9:3). [25]ಅವನ ಚಿಕ್ಕಪ್ಪನ ಹಾಗೆ, ಅವನೂ ಸಹ ಯೆರೂಸಲೇಮಿಗೆ ಕಲಿಕೆಗಾಗಿ ಹೋಗಿರಬಹುದು.ಅವರು ಪಸ್ಕ ಹಬ್ಬಕ್ಕೆ ಬಂದವರು, ಹಿಂದಿರುಗದೇ ಇರಬಹುದು, ಅವನ ಸಹೋದರಿ ಯೆರೂಸಲೇಮಿನಲ್ಲಿ ಮನೆಯನ್ನು ಹೊಂದಿರಬಹುದು, ಹೀಗಿದ್ದರೆ ಅವರು ಸ್ನೇಹಿತರಿರಬಹುದು. ಪೌಲನು ಮ್ನಾಸೋನನ ಮನೆಯ ವಾಸ ಏಕೆ? (21:16). [26]ಅವನು ಕ್ರೈಸ್ತನಾದಾಗ, ಮನೆಯಿಂದ ಹೊರಕ್ಕೆ ಬಂದಿರಬಹುದು (ಫಿಲಿಪ್ಪಿ 3:7, 8). ಹಲವು ಕಾರಣದಿಂದ ಅವನ ಸೋದರಳಿಯನು ಪೌಲನಿಗಾಗಿ ಚಿಂತಿಸಿದನು. ಪೌಲನು ತಾರ್ಸದಿಂದ ಹಿಂದಿರುಗಿದಾಗ, ತನ್ನ ಮನೆಯವರಲ್ಲಿ ಕೆಲವರನ್ನು ಪರಿವರ್ತನೆ ಮಾಡಿರಬಹುದು (ಅಪೊಸ್ತಲರ ಕೃತ್ಯಗಳು 9:30). ಅದರಲ್ಲಿ, ಅವನ ಸಹೋದರಿಯೂ ಒಳಗೊಂಡಿರಬಹುದು? ಸೋದರಳಿಯನು

ಯೆರೂಸಲೇಮಿಗೆ ಕಲಿಯಲು ಬಂದಿದ್ದರೆ, ಸಭೆಯಲ್ಲಿ ಪರಿವರ್ತನೆ ಗೊಂಡಿರಬಹುದು, ಅಥವಾ ಕ್ರೈಸ್ತರಿಗೆ ಅನುಕಂಪ ತೋರಿರಬಹುದು, ಪೌಲನ ಬಗ್ಗೆ ಚಿಂತನೆ ಮಾಡಿರಬಹುದು. [27]ಅಥವಾ ಅವನು ಗಾಳಿಸುದ್ದಿ ಕೇಳಿರಬಹುದು; ಅ ನಾಲ್ವತ್ತು ಜನರೂಈ ವಿಚಾರವನ್ನು ತಳಿದಿದ್ದರಿಂದ, ಅದನ್ನು ಗೌಪ್ಯವಾಗಿಡಲು ಸಾಧ್ಯವಾಗಲಿಲ್ಲ. (1) ಒಂದು ಸಾರಿಗಿಂತಲೂ ಹೆಚ್ಚಾಗಿ ಕೇಳಿದನು. (2) ಆ ಸಂಚನ್ನು ಚಾಚು ತಪ್ಪದೆ ಹೇಳಿದನು (ವಚನಗಳು 12-15ನ್ನು 20, 21ರ ಜೊತೆ ಹೋಲಿಸಿ). ಪೌಲನ ಸಹೋದರಿ, ಮಹಾಯಾಜಕನನ್ನು ಮದುವೆಯಾಗಿರಬಹುದು ಎಂಬ ಅಭಿಪ್ರಾಯವಿದೆ (ಸಭೆಯವರು ಸಂಚನ್ನು ತಿಳಿದು, ಯೌವನಸ್ಥನನ್ನು ಪೌಲನ ಬಳಿ ಕಳುಹಿಸಿರಬಹುದು ಎಂಬ ಅಭಿಪ್ರಾಯವಿದೆ). [28]ಖೈದಿಯು ತನ್ನ ಆಹಾರಕ್ಕಾಗಿ ಇತರರನ್ನು ಅವಲಂಬಿಸಿರುವನು (ಮತ್ತಾಯ 25:36, 40; ಇಬ್ರಿಯ 10:34; 13:3). [29]ಬಾಲಕರನ್ನು ವಯಸ್ಕರನ್ನು ರೋಮಾಯದ ಸಿಪಾಯಿಗಳು ಕೈಹಿಡಿದು ನಡೆಸಿರಬಹುದು. [30]ಹೀಗಿರುವುದಾದರೆ "ಸಂಚಿನ" ವಿಚಾರವನ್ನು ವಿವರವಾಗಿ ತಿಳಿಸಲು ಸಾಧ್ಯವಿದೆ.

[31]"ಸಿದ್ಧವಾಗಿ ಕಾಯುತ್ತಿದ್ದರು" ಅಂದರೆ ಅಧಿಕಾರಿ ಉತ್ತರನೀಡಲು ಸಿದ್ಧವಾದನು ಎಂಬ ಅರ್ಥವಲ್ಲ ಮನವಿಯು ಮರುದಿನ ಮುಂಜಾನೆ ಬಂದಿರಬಹುದು. [32]ಜನರು ಹೇಳುವ ಅಂಶದಲ್ಲಿ ಸತ್ಯಾಸತ್ಯತೆಗಳನ್ನು ಅರಿತಿದ್ದನು. [33]ಪೌಲನ ಸೋದರಳಿಯನನ್ನು ಬೇಗನೆ ಕಳುಹಿಸಿದ ನಂತರ, ತನ್ನ ನಿರ್ಧಾರವನ್ನು ಕೈಗೊಂಡನು. [34]ಪುರಾತನ ವಾಕ್ಯದಲ್ಲಿ ವಚನ 24 ಕೊನೇ ಭಾಗವನ್ನು, ಯೆಹೂದ್ಯರು ಪೌಲನನ್ನು ವಶಮಾಡಿಕೊಂಡ ನಂತರ, ಲಂಚ ತೆಗೆದುಕೊಂಡು ಈ ಕಾರ್ಯವನ್ನು ಮಾಡಿದನು ಎಂಬ ಅಪವಾದ ಮಾಡಲು ಯತ್ನಿಸಿದರು. [35]"ಈಟಿ" ಅಂದರೆ ಬಲಗೈಯಲ್ಲಿ ಹಿಡಿದು ಸಿದ್ಧನಾದವನೆಂಬ ಅರ್ಥ, "ಹಗುರವಾದ ಆಯುಧ" ಹಿಡಿದವನು ಎಂದು ಇತರ ಹೇಳಿಕೆಯಲ್ಲಿದೆ. [36]KJVಯ "ಮೃಗ" ಎಂಬುವ ಕುದುರೆ ಅಥವಾ ಹೇಸರಕತ್ತೆ ಇರಬಹುದು. [37]ಪೌಲನು ಆಯಾಸಗೊಂಡು ನಡೆಯುವಾಗ ಅವನಿಗೆ ಕುದುರೆಯನ್ನು ನೀಡಿರಬಹುದು, ಅವನು ಮುಗ್ಧನಾದ್ದರಿಂದ, ಇದನ್ನು ಮಾಡಿದರು. ಇದರಿಂದ ಅವರು ವೇಗವಾಗಿ ಹೋಗಲು ಸಾಧ್ಯವಾಯಿತು. ಅವನನ್ನು ಸುರಕ್ಷಿತವಾಗಿ ಕುಳ್ಳಿರಿಸಿದ್ದರು. ಅಲ್ಲಿ ಬಹುಪದವಿರುವದರಿಂದ, ಇನ್ನೊಬ್ಬ ಸಿಪಾಯಿಯೊಂದಿಗೆ ಪೌಲನನ್ನು ಬಂಧಿಸಿರಬಹುದು? ಅವನ ವಸ್ತುಗಳನ್ನು ಸಂಗಡ ಸಾಗಿಸಲು, ಅಧಿಕವಾದ ಅಗತ್ಯತೆ ಇತ್ತೇ? ಪೌಲನ ಸಂಗಡ ಇತರ "ಸೆರೆಯವರು" ಪ್ರಯಾಣಿಸಿರಬಹುದು (ಅರಿಸ್ತಾರ್ಕ ಅಪೊಸ್ತಲರ ಕೃತ್ಯಗಳು 27:2; ಕೊಲೊಸ್ಸೆ 4:10). ಅದನ್ನು ನಾವು ಅರಿಯೆವು. [38]ಮುಂದಿನ ಪಾಠದ ಫೇಲೀಕ್ಸನ ಟಿಪ್ಪಣಿ ನೋಡಿರಿ. [39]ಸಹಾಸ್ರಾಧಿಪತಿ ಎಂದರೆ, ಒಂದು ಸಾವಿರ ಸಿಪಾಯಿಗಳು ಅವನ ಕೈಕೆಳಗಿದ್ದರು. [40]William Barclay, *The Acts of the Apostles,* The Daily Study Bible Series, rev. ed. (Philadephia: Westminster Press, 1976), 166. ಒಬ್ಬ ಖೈದಿಯನ್ನು ಕಾಪಾಡಲು ಅನೇಕ ಸಿಪಾಯಿಗಳು ಕಳುಹಿಸಿದರು. ಹೇಗೂ, ಆ ಕಾಲದಲ್ಲಿ ಪಾಲಿಸ್ತೇನವು ಸಂದಿಗ್ದ ಪರಿಸ್ಥಿತಿಯಲ್ಲಿತ್ತು. ಆ ನಾಲ್ವತ್ತು ಜನರಿಂದ ರಕ್ಷಿಸಲು ಮಾತ್ರವಲ್ಲದೆ, ಪೌಲನಿಗೆ ಎದುರು ಬೀಳಲು ಯಾರಿಗೂ ಧೈರ್ಯ ಉಂಟಾಗದಂತೆ, ಅಷ್ಟೊಂದು ಜನರನ್ನು ಕಳುಹಿಸಿದ್ದನು.

[41]*ಅಪೊಸ್ತಲರ ಕೃತ್ಯಗಳು, 2ನೇ* ಕೈಸರೈಯ ಕುರಿತ ಪಾಠ ನೋಡಿರಿ (8:40; 9:30; 10:1, 24; 11:11; 12:19; 18:22; 21:8, 16). [42]ಅಕ್ಷರಶಃ ಇದು "ಒಂದು ಪತ್ರಿಕೆಯಾಗಿತ್ತು." [43]ಆ ಪತ್ರಿಕೆಯು ವಿಶೇಷವಾದ ಶೈಲಿಯಲ್ಲಿತ್ತು. ಅದು ಪ್ರತಿಕೃತವಾದ ಪತ್ರಿಕೆಯಾಗಿತ್ತು ಲೂಕನೇ ಈ ಪತ್ರದ ಶೈಲಿಯನ್ನು ಬರೆದಿರಬಹುದೆಂದು ಕೆಲವರು ಹೇಳುತ್ತಾರೆ, ಯಾಕಂದರೆ ಯಾವ ವಿಧದಲ್ಲೂ ಅವನು ಅದರ ಒಕ್ಕಣೆಯನ್ನು ತಿಳಿಯಲು ಅಸಾಧ್ಯವಾಗಿತ್ತು. ಕೈಸರೈಯಲ್ಲಿ ಪೌಲನ ಮುಂದೆ ಈ ಪತ್ರಿಕೆಯನ್ನು ಓದಲಾಯಿತು. ಲೂಕನು ಆತ್ಮ ಪ್ರೇರಿತನಾಗಿದ್ದನು, ಅದು ಪ್ರಮುಖವಾದ ಅಂಶವಾಗಿದೆ - ದೇವರು ಆ ಒಕ್ಕಣೆಯನ್ನು ಅರಿತ್ತಿದ್ದನು. [44]ಲೂಸ್ಯ ಎಂದರೆ, ಅವನು ಗ್ರೀಕ್‌ನಾಗಿ ಹುಟ್ಟಿದವನು ಎಂಬ ಅರ್ಥ. [45]ಲೂಕ 1:3 ರೊಂದಿಗೆ ಹೋಲಿಸಿರಿ. [46]ವೆಸ್ಟರ್ನ್ ಟೆಕ್ಸ್ಟ್‌ನಲ್ಲಿ ಮೋಶೆ ಹಾಗೂ ಯೇಸುವಿನ ಕುರಿತಾಗಿ ಇರುತ್ತದೆ. [47]ಅನುವಾದದಂತೆ, ಸಹಸ್ರಾಧಿಪತಿಯು "ಏಳುಸಾರಿ ನಾನು" ಎಂಬ ಪದವನ್ನು ಬಳಸಿರುವನು. [48]ಹಿರೀ ಸಭೆಯವರು ಆತನ ಹತ್ತಿರ ಬರುವವರೆಗೆ ಪೌಲನನ್ನು ಅವರ ಮುಂದೆ ತರಲು ಕಾದಿರುವುದು ಆತನ ಸಂಕಲ್ಪವಾಗಿತ್ತು, ಪೌಲನು ಮುಂಚಿತವಾಗಿಯೇ ಕೈಸರೆಗೆ ಕಳಹಿಸಲ್ಪಟ್ಟನು ಎಂಬ ವಿಚಾರವನ್ನು ತಿಳಿಸುವುದು ಈ ವಿಷಯವನ್ನು ವಿಚಾರಿಸಲು ಕೈಸರೆಗೆ ಹೋಗಬೇಕೆಂದು ಸೂಚಿಸಿದನು. ಈ ಸೂಚನೆ ಮಹಾಯಾಜಕನು ಕೈಸರೆಗೆ ಹೋದನೆಂಬುದು 24:1ರಲ್ಲಿ ಸೂಚಿಸಲಾಗಿದೆ. ಪ್ರಾಚಾಯಿತ ವಾಕ್ಯ ಪ್ರಕಾರ, ಪೌಲನನ್ನು ನಿಂದಿಸುವವರು ಕೈಸರೆಗೆ ಹೋಗಬೇಕೆಂದು ಅಧಿಕಾರಿ ಅಪ್ಪಣೆ ಇಟ್ಟನು ಎನ್ನಲಾಗಿದೆ. [49]ಹಿರಿಸಭೆಯ ಮುಂದೆ ಪೌಲನು ದೇವಾಲಯವನ್ನು ಅಶುದ್ಧಮಾಡಿದನೆಂಬ ವಿಷಯವನ್ನು ವಿಚಾರಿಸಲಿಲ್ಲ - ಅದು ಪ್ರಮುಖ ಆರೋಪವೇ. [50]ಇಲ್ಲಿ ಯೇಸುವಿನ ವಿಚಾರಣೆಗೆ ಇನ್ನೊಂದು ಹೋಲಿಕೆ ಇದೆ (ಯೋಹಾನ 18:38). ಲೂಕನ

ರೋಮಾಯದ ಅಧಿಕಾರಿಗೆ ಬರೆಯುತ್ತಿದ್ದನು. ಕ್ರೈಸ್ತರು ರೋಮಾಯರ ಯಾವುದೇ ನಿಯಮವನ್ನು ಮೀರಲಿಲ್ಲವೆಂದು ಲೂಕನು ಸ್ಪಷ್ಟಪಡಿಸಿದ್ದನು.

[51]ಸಿಪಾಯಿಗಳ ಓಡಾಟ ಪಟ್ಟಣದಲ್ಲಿ ಸಹಜವಾದ ಸಂಗತಿಯಾಗಿತ್ತು. [52]ಇನ್ನೊಂದು ಬಾರಿ ಪೌಲನು ರಾತ್ರಿ ಕಾಲದಲ್ಲಿ ಸಾಗಿಸಲ್ಪಟ್ಟನು (9:25; 17:10). [53]ಅಫೇಕ್ ಎಂಬ ಹಳೆ ಒಡಂಬಡಿಕೆಯ ಹೆಸರೇ ಅಂತಿಪತ್ರ (1 ಸಮುವೇಲ 4:1). ಮಹಾ ಹೆರೋದನು ಈ ಪಟ್ಟಣವನ್ನು ಪುನಃ ಕಟ್ಟಿಸಿ ಆತನ ತಂದೆಯಾದ ಅಂತಿಪತ್ರನ ಹೆಸರನ್ನು ಇಟ್ಟನು. [54]*ಅಪೊಸ್ತಲರ ಕೃತ್ಯಗಳು, 4ನೇ* ಪೌಲನ ಮೂರನೆ ಪ್ರಯಾಣದ ನಕ್ಷೆ ನೋಡಿರಿ. [55]Charles R. Swindoll, *The Strength of an Exacting Passion* (Anaheim, Calif.: Insight For Living, 1992), 103. [56]ಶಿಕ್ಷೆಯು ಆಡಳಿತದ ಸಂಸ್ಥಾನಕ್ಕೆ ಅನುಗುಣವಾಗಿರುತ್ತದೆ. ಫೇಲೀಕ್ಸನ ನಿರ್ಣಯದಲ್ಲಿ ಈ ಅಂಶವು ಒಳಗೊಂಡಿತ್ತು: (1) ಕಿಲಿಕ್ಯವು ರೋಮಾ ಸಂಸ್ಥಾನವಾಗಿತ್ತು; (2) ಪೌಲನು ರೋಮಾ ಹಕ್ಕುದಾರನಾಗಿದ್ದನು; (3) ಫೇಲೀಕ್ಸನ ಸರಹದ್ದಿನಲ್ಲಿ ಅಪರಾಧವು ಜರುಗಿತ್ತು; (4) ದೇಶಾಧಿಪತಿಯು, ಪೌಲನ ಮೇಲೆ ಅರೋಪಮಾಡಲು ಯೆಹೂದ್ಯರು ಕಿಲಕ್ಯಕ್ಕೆ ಹೋಗಬೇಕೆಂದು ಹೇಳಿದ್ದರೆ, ಅದು ಅವರಿಗೆ ಅ ಸಂತೋಷ ಉಂಟುಮಾಡುತ್ತಿತ್ತು, ಅವನು ಆ ಧೈರ್ಯವನ್ನು ಮಾಡಲಿಲ್ಲ (24:27). [57]ಪತ್ರಿಕೆಯ ಪ್ರಕಾರ ಆರೋಪ ಸಲ್ಲಿಸಬೇಕಿತ್ತು (ವಚನ 30). ಮುಂದಿನ ಪಾಠದಲ್ಲಿ ಅದನ್ನು ನೋಡುತ್ತೇವೆ. [58]"ಪಟಾಲಮ" ಅಂದರೆ ಅಧಿಕೃತ ಕಚೇರಿ ನಿಗದಿತವಾದ ಮನೆಗಳಲ್ಲಿ ಇರುತ್ತಿದ್ದನು (ಮತ್ತಾಯ 27:27; ಮಾರ್ಕ 15:16; ಯೋಹಾನ 18:28, 33; 19:9; ಫಿಲಿಪ್ಪಿ 1:13). [59]Quoted in Wiersbe, 496. [60]Ed Wharton, *The Action of the Book of Acts* (Dallas: Gospel Teachers Publications, 1977), 54.